ಮಾಡುತ್ತಾ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶಾಸನ ರಚನೆ ಕಾರ್ಯಕಲಾಪಗಳು

ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1996.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996 ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : **ವಿಧೇಯಕವನ್ನು ಮಂಡಿಸಲಾಗಿದೆ**

ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996

ಪರ್ಯಲೋಚನಾ ಪ್ರಸ್ತಾಪ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ)ವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕಂದಾಯ ಮಂತ್ರಿಗಳು ಈ ಮೊದಲು ಮಂಡಿಸಿದ ಮೈಸೂರು ಇನಾಮುಗಳ ರದ್ದಿಯಾತಿ ವಿದೇಯಕದ ಬಗ್ಗೆ ಎಕ್ಸಪ್ಲೈನ್ ಮಾಡಲಿ.

ಶ್ರೀ ಆರ್.ಎಲ್. ಜಾಲಪ್ಪ : ಆ ವಿಧೇಯಕವನ್ನು ನಾವತ್ತು ಇಂಟ್ರಡ್ಯೂಸ್ ಮಾಡಿದ್ದೇನೆ. ಅದು ನಾಳೆ ಕನಸಿಡರೇಷನಗೆ ಬಂದಾಗ ಆ ಬಗ್ಗೆ ಮಾತನಾಡುತ್ತೇನೆ. ಭೂ ಸುಧಾರಣೆಗಳ ವಿಧೇಯಕ ಸ್ವಲ್ಪ ತಾಪತ್ರಯದ್ದು. ಇದು ಮೊದಲು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಒಳ್ಳೆಯ ಮಸೂದೆಯನ್ನು ಮಂಡಿಸಲು ತಯಾರಿಲ್ಲ. ಕೆಟ್ಟ ಮಸೂದೆಯನ್ನು ಮಂಡಿಸಲು ಅವರೇಕೆ ಹತ ಹಿಡಿಯುತ್ತಿದ್ದಾರೋ ತಿಳಿಯದು. ಇನಾಮುಗಳ ರದ್ದಿಯಾತಿ ವಿಧೇಯಕವನ್ನು ಅಂಗೀಕರಿಸಲು ನಾವು ಸಹಕಾರ ಕೊಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮೈಸೂರು ಇನಾಮುಗಳ ರದ್ದಿಯಾತಿ ವಿಧೇಯಕವನ್ನು ನಾಳೆ ಕನಸಿಡರೇಷನಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಈಗ ತಾನೇ ಇಂಟ್ರಡ್ಯೂಸ್ ಮಾಡಿರುವ ಬಿಲ್ಲನ್ನು ಈಗಲೇ ವಾಸು ಮಾಡಿಕೊಡುತ್ತೇನೆ ಎಂದು ಅವರು ಧಾರಾಳತನ ತೋರಿಸುತ್ತಿದ್ದಾರೆ. ಆ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಮೆಚ್ಚುಗೆ ಮಾತನ್ನು ಹೇಳುವುದಿಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಅವರು ಒಂದೊಂದು ಸಲ ಮಾತ್ರವೇ ಧಾರಾಳತನ ತೋರಿಸುತ್ತಾರೆ.

ಅಧ್ಯಕ್ಷರು : ಆ ಧಾರಾಳತನ ಭೂ ಸುಧಾರಣೆಗಳ ವಿಧೇಯಕವನ್ನು ಅಂಗೀಕರಿಸುವಲ್ಲಿ ತೋರಿಸಿ ಎಂದು ಅವರಿಗೆ ನೀವು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಂದಾಯ ಮಂತ್ರಿಗಳಿಗೆ ವಿಧೇಯಕ ಮಂಡಿಸುವುದಕ್ಕೆ ಏನು ತಾಪತ್ರಯವೋ ಗೊತ್ತಾಗುತ್ತಿಲ್ಲ. ವಿಧೇಯಕಕ್ಕೆ ಮತ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ.

ಅಧ್ಯಕ್ಷರು : ಇದರಲ್ಲಿ ತಾಪತ್ರಯವೇನೂ ಇಲ್ಲ. ಆದರೆ ವಿಧಾನ ಸಭೆಯ ಇಂದಿನ ಕಾರ್ಯಕಲಾಪ ಪಟ್ಟಿಯನ್ವಯ ಮೈಸೂರು ಇನಾಮುಗಳ ರದ್ದಿಯಾತಿ ವಿಧೇಯಕವನ್ನು ಕೇವಲ ಮಂಡಿಸಬೇಕಾಗಿದೆ. ಮಾನ್ಯ ಸದಸ್ಯರುಗಳಿಗೆ ವಿಧೇಯಕದ ಪ್ರತಿಗಳನ್ನು ಕೊಟ್ಟು, ಅದಕ್ಕೆ ಸಂಬಂಧಿಸಿದ ಎಲ್ಲಾ ಸಾಮಗ್ರಿಗಳನ್ನು ಒದಗಿಸಿದ ಮೇಲೆಯೇ ಅದನ್ನು ಕನಸಿಡರೇಷನಗೆ ತೆಗೆದುಕೊಳ್ಳಲು ಸಾಧ್ಯ. ನಾವು ವಿಧೇಯಕವನ್ನು ಮಂಡಿಸುತ್ತೇವೆ ಎಂದು ಕಲಾಪ ಪಟ್ಟಿಯಲ್ಲಿ ಸೂಚಿಸಿ, ನಂತರ ಅದನ್ನು ಕನಸಿಡರೇಷನಗೆ ತೆಗೆದುಕೊಂಡರೆ ನೀವೇ ಅದಕ್ಕೆ ಆಬ್ಜೆಕ್ಷ ಮಾಡುತ್ತೀರಿ. ಈಗ ಭೂ ಸುಧಾರಣೆಗಳ ವಿಧೇಯಕವನ್ನು ರೀ-ಕನಸಿಡರೇಷನ್‌ಗೆ ತೆಗೆದುಕೊಳ್ಳೋಣ. ಮಾನ್ಯ ಕಂದಾಯ ಮಂತ್ರಿಗಳು ವಿಧೇಯಕದ ಬಗ್ಗೆ ಈಗ ವಿವರಣೆ ನೀಡಬಹುದು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಹಿಂದೆ ಇದೇ ವಿಧೇಯಕದ ಮೇಲೆ ಚರ್ಚೆ ಮಾಡುವಾಗ ನಾನು ಆಗಾಗ್ಗೆ ಉತ್ತರ ಕೊಟ್ಟಿದ್ದೇನೆ. ಆಮೇಲೆ ನಾನು ಉತ್ತರ ಕೊಡಬೇಕು ಅಂತ

ಪ್ರಯತ್ನ ಪಟ್ಟಾಗ, ನೀವು ಆಗಲೇ ಎಲ್ಲಾ ಉತ್ತರ ಕೊಟ್ಟುಬಿಟ್ಟಿದ್ದೀರಿ ನಿಮ್ಮ ಮನಸ್ಸಿಗೆ ಏನು ಗೊತ್ತಿದೆ ಎಂದು ಹೇಳಿ ಅವರು ಇದನ್ನು ವಿರೋಧಿಸಿದ್ದಾರೆ. ಸದನವು ಆಗ ಧ್ವನಿಮತದಿಂದ ಈ ಬಿಲ್‌ನ್ನು ಪಾಸ್ ಮಾಡಿದೆ. ನಂತರ ಮೇಲ್ಮನೆಯಲ್ಲಿ ಈ ಬಿಲ್ ಅನ್ನು ತೆಗೆದುಕೊಂಡು ಹೋದಾಗ, ಅಲ್ಲಿ ದುರಾದೃಷ್ಟವಶಾತ್ ವಿರೋಧ ಪಕ್ಷಗಳು ಅದನ್ನು ಅಲ್ಲಿ ಸೋಲಿಸಿದವು. ಈಗ ಪುನಃ ಈ ಬಿಲ್ಲನ್ನು ಈ ಸದನದ ಮುಂದೆ ಇದನ್ನು ಅಪ್ರೂವ್ ಮಾಡುವುದಕ್ಕೋಸ್ಕರ ಮಂಡಿಸಿದ್ದೇನೆ. ಇದನ್ನು ದಯಮಾಡಿ ಅಪ್ರೂವ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷಗಳಿಗೆ ಮಜಾರಿಟಿ ಇದ್ದದ್ದರಿಂದ ಈ ಬಿಲ್ ಅಲ್ಲಿ ತಿರಸ್ಕೃತಗೊಂಡಿತ್ತು.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಭೂ ಸುಧಾರಣೆಗಳ ವಿಧೇಯಕ (ತಿದ್ದುಪಡಿ) 1996ನ್ನು ಪುನರ್ ಪರ್ಯಾಲೋಚಿಸಬೇಕೆಂದು ಮಾನ್ಯ ಕಂದಾಯ ಮಂತ್ರಿಗಳು ಸದನದ ಮುಂದಿಟ್ಟಿದ್ದಾರೆ. ಇಲ್ಲಿ ಬಹಳ ಉದ್ದ ಭಾಷಣ ಮಾಡುವಂತಹ ಅಗತ್ಯವಿಲ್ಲ. ಈ ತಿದ್ದುಪಡಿ ವಿಧೇಯಕವನ್ನು ತರುವುದರಿಂದ ರೈತ ಸಮೂಹಕ್ಕೆ ಅನ್ಯಾಯವಾಗುತ್ತದೆ ಎಂಬ ದೃಷ್ಟಿಯಿಂದ ಈ ವಿಧೇಯಕವನ್ನು ಹಿಂತೆಗೆದುಕೊಳ್ಳಲು ಈ ಮನೆಯಲ್ಲೂ ಹಾಗೂ ಮೇಲ್ಮನೆಯಲ್ಲೂ ಸಹ ನಾವು ಒತ್ತಾಯ ಮಾಡಿದ್ದೆವು. ಆದರೆ ಅದು ನಿಮ್ಮಿಂದ ಸಾಧ್ಯವಾಗುವುದಿಲ್ಲ ಎನ್ನುವುದಾದರೆ, ಅಲ್ಲಿ ಇರುವಂತಹ ಕೊರತೆಗಳನ್ನು ಸರಿಪಡಿಸಿಕೊಳ್ಳಬೇಕು ಎನ್ನುವಂತಹ ಪ್ರಾಮಾಣಿಕ ಕಳಕಳಿ ಏನಾದರೂ ತಮಗೆ ಇದ್ದರೆ ಈ ವಿಧೇಯಕವನ್ನು ವಿತಡ್ರಾ ಮಾಡಿ. ಇದೇ ಅಭಿಪ್ರಾಯವು ಉಭಯ ಸದನಗಳಲ್ಲೂ ವ್ಯಕ್ತವಾಗಿದೆ. ಈ ವಿಧೇಯಕವನ್ನು ಜಂಟಿ ಸದನ ಸಮಿತಿಗೆ ಕಳುಹಿಸಿಕೊಡಿ, ಆ ಬಗ್ಗೆ ಅಲ್ಲಿ ಪರಿಶೀಲನೆ ಮಾಡೋಣ ಎಂದು ಸಲಹೆ ಕೊಟ್ಟಿದ್ದೆವು. ಇದನ್ನು ಕೇವಲ ಈ ಕೆಳಮನೆ ಮತ್ತು ಮೇಲ್ಮನೆಯ ಸದಸ್ಯರುಗಳು ಮಾತ್ರ ವಿರೋಧಿಸಿರುವಂತಾದ್ದಲ್ಲ, ಸಮಾಜದ ಬಗ್ಗೆ ಕಳಕಳಯಿರುವಂಥ ಎಲ್ಲಾ ಹಿರಿಯರೂ ಸಹ ಈ ಮಸೂದೆ ಬಗ್ಗೆ ತಮ್ಮದೇ ಆದಂಥ ರೀತಿಯಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ, ವಕೀಲರಾದವರೂ ಸಹ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಜೊತೆಗೆ ಪತ್ರಿಕಾ ರಂಗದ ಹಿರಿಯರೂ ಅವರದೇ ಆದ ಧಾಟಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಯಾರನ್ನು ಸಮಾಜ ಸುಧಾರಕರೆಂದು ನೀವು ಕರೆಯುತ್ತೀರೋ ಅವರೂ ಸಹ ಅಭಿಪ್ರಾಯ ವ್ಯಕ್ತಪಡಿಸಿದ್ದಾರಲ್ಲದೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿರುವ ಬಹುತೇಕ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಸದರಿ ಮಸೂದೆಯನ್ನು ವಿರೋಧಿಸಿದ್ದಾರೆ. ನಿಜ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಮಸೂದೆ ತಂದಾಗ ಆಡಳಿತ ಪಕ್ಷದ ಸದಸ್ಯರುಗಳಿಗೆ ಇದು ವಿರೋಧವೆಂದು ಅನ್ನಿಸಿದರೂ ಸಹ ಆ ಕೆಲಸ ಮಾಡುತ್ತಾರಲ್ಲಾ, ಮಾಡಲೆ ಎನ್ನುವ ದೃಷ್ಟಿಯಿಂದ ತಾವುಗಳು ಮನಸ್ಸಿಲ್ಲದ ಮನಸ್ಸಿನಿಂದ ಅತ್ತ ಕಡೆಯಿಂದ ಅನಿವಾರ್ಯವಾಗಿ ಸದಸ್ಯರುಗಳ ಕೈ ಎತ್ತಿಸುವಂಥ ಒಂದು ಪ್ರಶ್ನೆ ಬಂದಿದೆ. ಈ ಕುರಿತು ಆತ್ಮಸಾಕ್ಷಿಯಾಗಿ ವೋಟ್ ಮಾಡಿಸುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿಸಿದರೆ ಸರ್ಕಾರ ಖಂಡಿತವಾಗಿಯೂ ರೈತರ ಬಗ್ಗೆ ಕಳಕಳಿ ಇರುವಂಥ ಅತ್ತ ಕಡೆ ಸದಸ್ಯರುಗಳು...

ಒಬ್ಬ ಮಾನ್ಯ ಸದಸ್ಯರು : ಅತ್ತ ಕೈ ಎತ್ತುವವರೆಲ್ಲಾ ಜವಾಬ್ದಾರಿ ಇರುವವರೇ? ನಾವೂ ಕೂಡ

ನಿಮ್ಮಂತೆ ಜನರಿಂದ ಚುನಾವಣೆಯಲ್ಲಿ ಆರಿಸಿ ಬಂದಿರುವವರು.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಅವರಿಗೆ ಆತ್ಮವೇ ಇಲ್ಲ, ಇನ್ನು ಸಾಕ್ಷಿ ಎಲ್ಲಿಂದ ಬರುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕುರಿತು ಕೇಂದ್ರ ಸರ್ಕಾರದ ಒಬ್ಬ ಮಂತ್ರಿಗಳೂ ಸಹ ಈ ಮಸೂದೆ ನೋಡಿ ತುಂಬಾ ನೊಂದು ಈ ಮಸೂದೆ ಸಾಧುವಾದುದಲ್ಲವೆಂಬ ಅವರದೇ ಆದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಆದುದರಿಂದ, ಸದರಿ ಮಸೂದೆ ರಾಜ್ಯದ ರೈತರಿಗೆ 'ಮರಣ ಶಾಸನ' ವಾಗಿದೆ ಯೆಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದ ರೈತರ ಹಿತಾಸಕ್ತಿಯನ್ನು ಕಡೆಗಣಿಸಿ ಯಾರೋ ಕೆಲವು ಬಹುರಾಷ್ಟ್ರೀಯ ಕಂಪನಿಗಳವರಿಗೆ, ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಡೆಸಿಕೊಂಡು ಬಡವರಿಗೆ ನೆಟ್ಟಿಗಳನ್ನು ಕೊಡದೆ ಕೋಟ್ಯಾಧಿಪತಿಗಳಾಗುತ್ತಿರುವಂಥ ಕೆಲವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಸುಪ್ರೀಂ ಕೋರ್ಟಿನಲ್ಲಿ ಯಾವುದನ್ನು ನೀವು ಸಾಧಿಸುವುದಕ್ಕಾಗಲಿಲ್ಲವೋ ಅದನ್ನು ಮಸೂದೆಗೆ ತಿದ್ದುಪಡಿ ತರುವುದರ ಮೂಲಕ ಮಸೂದೆಯನ್ನು ಅಂಗೀಕರಿಸಿ ಯಾರೋ ಕೆಲವರಿಗೆ ಅನುಕೂಲ ಮಾಡಿಕೊಡುವಂಥ 'ಕರಾಳ ಶಾಸನ' ವಾಗಿದೆ. ಅದಕ್ಕೋಸ್ಕರ, ಬಹುಶಃ ಈ ಸರ್ಕಾರಕ್ಕೆ ಗುರುದೈವವೂ ಇಲ್ಲ, ತಲೆಯೂ ಇಲ್ಲವೆಂದು ಹೇಳಬೇಕಾಗುತ್ತದೆ. ಈ ಮಸೂದೆ ಮಂಡಿಸಿರುವುದನ್ನು ನೋಡಿದರೆ.... ಒಬ್ಬ ಮಾನ್ಯ ಸದಸ್ಯರು : ನಿಮಗಿಂತಲೂ ಜಾಸ್ತಿ ಇದೆ.

(Interruptions)

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೆ, ನಮಗೆ ಎರಡೂ ಇದೆ, ಅವರಿಗೆ ಮೂರೂ ಇಲ್ಲ!

ಅಧ್ಯಕ್ಷರು : ಸುಮ್ಮನೆ ಕುಳಿತುಕೊಳ್ಳಿ. ಯಾರ್ಯಾರಿಗೆ ಏನೇನಿದೆ, ಏನೇನಿಲ್ಲವೆಂಬ ನಿಮ್ಮ ನಿಮ್ಮ ಪುಣ್ಯಕ್ಕೆ ಏನಾದರೂ ಇದ್ದುಕೊಳ್ಳಿ. ನಾನು ಸಭಾಧ್ಯಕ್ಷನಾದ ತಪ್ಪಿಗೆ ಏನು ಪರಿಸ್ಥಿತಿ ಬಂದಿದೆ ನೋಡಿ. ವಿರೋಧಪಕ್ಷದ ನಾಯಕರು ಹೇಳುತ್ತಾರೆ, ಸರ್ಕಾರಕ್ಕೆ ಹೃದಯ, ತಲೆ ಇಲ್ಲವೆಂದು. ಆದರೆ, ನಾರಾಯಣಸ್ವಾಮಿಯವರು ಹೇಳುತ್ತಾರೆ. ನಮಗೆ ಎರಡೂ ಇಲ್ಲವೆಂದರೆ ಅವರಿಗೆ ಮೂರೂ ಇಲ್ಲವೆಂದು. ನಾನು ಸಭಾಧ್ಯಕ್ಷನಾದ ತಪ್ಪಿಗೆ ಯಾರ್ಯಾರಿಗೆ ಏನೇನಿದೆಯೆಂದು ಹುಡುಕುವ ಆ ರೀತಿಯ ಜವಾಬ್ದಾರಿ ಕೊಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ಯಾರ್ಯಾರಿಗೆ ಏನೇನು ಇರುತ್ತದೆಂದು ಹುಡುಕಲು ತಾವು ದಯವಿಟ್ಟು ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರೂ ಇಲ್ಲ ಈ ಕಡೆ, ಎರಡೂ ಇಲ್ಲ ಆ ಕಡೆ, ಅದರ ಅಧ್ಯಕ್ಷರು ತಾವೆಂದರೆ...

ಅಧ್ಯಕ್ಷರು : ಅಲ್ಲ, ನಾನು ನಿಮ್ಮ ಎರಡೂ ಗುಂಪಿಗೂ ಸೇರಿದವನಲ್ಲ. ನನ್ನ ಹತ್ತಿರ ಎಲ್ಲಾ ಇದ್ದುದರಿಂದ ಇಲ್ಲಿಗೆ ಬಂದುಬಿಟ್ಟೆ.

ಶ್ರೀ ವಾಟಾಳ್ ನಾಗರಾಜ್ : ಯಾರ್ಯಾರಿಗೆ ಏನೇನಿದೆ ಎಂಬುದನ್ನು ಹುಡುಕುವುದಕ್ಕೆ ಒಂದು ಸದನ ಸಮಿತಿ ರಚಿಸೋಣವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ವಿನಂತಿಸಿಕೊಳ್ಳುವುದೇನೆಂದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹುಮತವಿದೆಯೆಂದು ಕೆಲವು ಸಂದರ್ಭದಲ್ಲಿ ಕೆಲವು ವಿಷಯಗಳ ಬಗ್ಗೆ ತಾವು ಮಂಜೂರಾತಿ ತೆಗೆದುಕೊಂಡು ಹೋಗುವುದು ಸ್ವಾಭಾವಿಕ, ಕೆಲವು ಸಂದರ್ಭದಲ್ಲಿ ನಾವು ವಿರೋಧಿಸುತ್ತೇವೆ. ಆದರೆ, ಜನತೆಯ ಹಿತದೃಷ್ಟಿಯಿಂದ ಸಂಖ್ಯಾಬಲ ಮುಖ್ಯವಲ್ಲವೆಂಬುದು ತಮಗೆ ಗೊತ್ತಿದೆ. ಈಗ ಒಂದು ಸಂಖ್ಯೆಯಲ್ಲಿ ತಾವು ಜಾಸ್ತಿ ಇದ್ದರೂ ಸಹ ಅಂದರೆ 51 ಸಂಖ್ಯೆ ನೀವಿದ್ದಾಗ, 50 ಸಂಖ್ಯೆಯಲ್ಲಿ ನಾವಿದ್ದಾಗ ನೀವು ಆಡಳಿತ ಪಕ್ಷದಲ್ಲಿರುತ್ತೀರಿ, ನಾವು ವಿರೋಧ ಪಕ್ಷದಲ್ಲಿರುತ್ತೇವೆ. ಅದರರ್ಥ ನೀವು ತರುವಂಥ ಎಲ್ಲಾ ರೀತಿಯ ತಿದ್ದುಪಡಿಗಳು, ಶಾಸನಗಳು ಜನ ಮನ್ನಣೆ ಗಳಿಸುತ್ತೇವೆ. ಜನರ ವಿಶ್ವಾಸ ಗಳಿಸುತ್ತವೆ ಮತ್ತು ಜನಹಿತ ಗಳಿಸುತ್ತದೆಂದಲ್ಲ. ಇತ್ತ ಕಡೆ ಕುಳಿತಿರುವಂಥ ವಿರೋಧ ಪಕ್ಷದವರಾದ ನಾವಿದ್ದೇವೆ. ನಿಮ್ಮ ಆಸಕ್ತಿ ಬೇರೆ. ಅಂದರೆ ಯಾರೋ ಬಹುರಾಷ್ಟ್ರೀಯ ಕಂಪನಿಗಳವರು ಇಲ್ಲಿಗೆ ಬರುವಂತಹವರಿಗೆ ಅವಕಾಶ ಮಾಡಿಕೊಡುವುದು ಮತ್ತು ಯಾವುದೋ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಅವಕಾಶ ಮಾಡಿಕೊಡುವುದು. ನಮ್ಮ ಹಿತಾಸಕ್ತಿ ಈ ರೈತ, ಈ ದೇಶಕ್ಕೆ ಅನ್ನ ಕೊಡುವಂಥ ಬಡ ರೈತ. ನನಗೆ ಏನು ದುಃಖವಾಗಿದೆಯೆಂದರೆ ಕೆಲವರಾದರೂ ಹೃದಯ, ತಲೆ ಇದೆಯನ್ನುವವರು, ರೈತರ ಪರವಾಗಿದ್ದೇವೆ ಎನ್ನುವವರು ದಯಮಾಡಿ ಹೊರಗಡೆ ಇರಿ, ಸದನದಲ್ಲಿಟ್ಟುಕೊಂಡು ಇಕ್ಕಟ್ಟಿಗೆ ಸಿಕ್ಕಿ ಹಾಕಿಕೊಳ್ಳಬೇಡಿ. ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ನಿಮ್ಮ ಪರವಾಗಿ ಅಲ್ಲಿ ಬೇರೆ ಯಾರನ್ನಾದರೂ ಕುಳ್ಳರಿಸಿ, ಗ್ರಾಮೀಣ ಪ್ರದೇಶದ ಬಡವರ ಬಗ್ಗೆ ಕಳಕಳಿ ಇರುವಂಥ, ಇಂತಹ ಪರಿಸ್ಥಿತಿಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರನ್ನು ಕುಳ್ಳರಿಸಿಕೊಂಡು ಇಂತಹ ಕರಾಳ ಶಾಸನವನ್ನು ಬಹುಶಃ ಕಳೆದ ಐವತ್ತು ವರ್ಷಗಳಲ್ಲೇ ಈ ನಾಡಿನ ಮಣ್ಣಿನ ಮಕ್ಕಳಿಗೆ ದ್ರೋಹವೆಸಗುವಂತ ಈ ರೀತಿಯ ಕರಾಳ ಶಾಸನವನ್ನು ಹಿಂದೆಂದೂ ಯಾರೂ ತೋರಿಸುವಂಥ ಸಾಹಸ ಮಾಡಿರಲಿಲ್ಲ.ಕಳೆದ 14-15 ತಿಂಗಳು ಹಿಂದೆ ಅಂದರೆ ಚುನಾವಣೆಗೆ ಮುನ್ನ ಒಂದು ಫ್ಲಾಟ್‌ಫಾರಂನಲ್ಲಿ ನಿಂತುಕೊಂಡು ಏನು ಭಾಷಣ ಮಾಡಿದ್ದಿರಿ. ಈ ನಾಡಿನ ಮಣ್ಣಿನ ಮಕ್ಕಳ ಬಗ್ಗೆ, ರೈತರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ ಏನು ಹೇಳಿದ್ದೀರೆಂಬುದನ್ನು ನೆನಪಿಸಿಕೊಳ್ಳಿ. ಏಕೆಂದರೆ ಇನ್ನು ಮೂರೂವರೆ-ನಾಲ್ಕು ವರ್ಷಗಳಷ್ಟು ಸಮಯವಿದ್ದು, ಆಗ ಚುನಾವಣೆ ಮತ್ತೆ ನಡೆಯುತ್ತದೆ, ಆಷ್ಟೊತ್ತಿಗೆ ಜನರು ಮರೆತುಬಿಡುತ್ತಾರೆಂಬ ಭ್ರಮೆಯಲ್ಲಿರಬೇಡಿ. ಜನರು ಪ್ರಜ್ಞಾವಂತರಾಗಿದ್ದಾರೆ. ಈ ರೀತಿಯ ವಿಶೇಷ ಸಂದರ್ಭ ಬಂದಾಗ ಯಾವ ರೀತಿ ರೈತ ಸಮೂಹಕ್ಕೆ ದ್ರೋಹವೆಸಗುವಂಥ ಇಂತಹ ಮಸೂದೆಗಳು ಸದನದಲ್ಲಿ ಬಂದಾಗ ಆಡಳಿತ ಪಕ್ಷದವರು ಸಹಿಸಿಕೊಂಡು ಕುಳಿತರೂ ಸಹ ನಾಳೆ ನೀವು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋದಾಗ ಇಕ್ಕಟ್ಟಿನಲ್ಲಿ ಏನಾದರೂ..... ಜಾಲಪ್ಪನವರು ಆ ಕೆಲಸ ಮಾಡಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಬಲವಂತ ಮಾಡಿ ಒಪ್ಪಿಸುವುದಕ್ಕೆ ಪಾಪ! ನೀವ್ಯಾಕೆ ಸಿಕ್ಕಿಹಾಕಿಕೊಳ್ಳುತ್ತೀರಿ? ಜಾಲಪ್ಪನವರಿಗೆ ಬೆವರು ಬರುತ್ತಿದೆ, ಏನಪ್ಪಾ, ಇದು ಈ ಮಸೂದೆಯನ್ನು ನಾನು ಪಾಸ್ ಮಾಡಿಸುತ್ತಿದ್ದೇನಲ್ಲಾ ಎಂದು ಗಡಿಬಿಡಿಯಲ್ಲಿ ಗಾಬರಿಯಾಗಿದ್ದಾರೆ. ಹಿರಿಯರಾದವರಿಗೆ ಆ ಹೃದಯ, ಬುದ್ಧಿಶಕ್ತಿ ಇದ್ದಂಥವರಿಗ

ನಿಜವಾಗಿಯೂ ಒಂದೊಂದು ಸಲ ನೋವಾಗುತ್ತದೆ. ಬಹುಶಃ ಇಡೀ ರಾತ್ರಿ ಅವರು ನಿದ್ದೆ ಮಾಡಿರಲಿಕ್ಕಿಲ್ಲ. ವಿಧಾನ ಪರಿಷತ್ತಿನಲ್ಲಿ ಈ ಮಸೂದೆ ಅಂಗೀಕೃತವಾಗದೆ ಮತ್ತೆ ಇಲ್ಲಿಗೆ ಕಳುಹಿಸಿದ್ದುದು, ಅದನ್ನು ಪುನಃ ಇಲ್ಲಿ ಮಂಡನೆ ಮಾಡುವಂಥ ಪರಿಸ್ಥಿತಿ ನನ್ನ ಕಾಲಕ್ಕೇ ಬಂತಲ್ಲಪ್ಪಾ ಎಂದು ಚಿಂತಿಸುತ್ತಿರಬಹುದು. ಯಾವ ಕಾರಣಕ್ಕೂ ಕೂಡ ಈ ಮಸೂದೆಯನ್ನು ಇಲ್ಲಿ ಪಾಸ್ ಮಾಡುವುದಕ್ಕೆ ಬಿಡುವುದಿಲ್ಲ, ಇದಕ್ಕೆ ನಮ್ಮ ಮನಸ್ಸು ಒಪ್ಪುತ್ತಿಲ್ಲ. ಆತ್ಮಸಾಕ್ಷಿಗೆ ವಿರುದ್ಧವಾಗಿ ನೀವು ಕೆಲಸ ಮಾಡಬೇಡಿ. ದಯಮಾಡಿ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ ನಮ್ಮ ಸಹಕಾರವನ್ನು ಆ ದಿಸೆಯಲ್ಲಿ ತಗೆದುಕೊಂಡು ಚರ್ಚಿಸಿ ನಂತರ ಒಂದು ಅಂತಿಮ ತೀರ್ಮಾನಕ್ಕೆ ಬರೋಣವೆಂಬ ಸಲಹೆ ಕೊಡುತ್ತೇವೆ. ಅದು ಬಿಟ್ಟು 'ಇಲ್ಲ ಯದಿಯೂರಪ್ಪನವರೇ, ನನಗೆ ತಲೆ ಗಟ್ಟಿ ಇದೆ. ಕಲ್ಲಿಗೆ ಒಡೆದುಕೊಳ್ಳುತ್ತೆನೆ' ಎಂದರೆ ಏನೋ ವಿನಾಶ ಕಾಲ ಹತ್ತಿರ ಬಂದಿದೆ, ಕೊನೆಗೆ ನಮ್ಮ ಪಕ್ಷದ ಎಲ್ಲಾ ಹಿರಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಡುವವರಿದ್ದಾರೆ. ಒಂದು ವೇಳೆ ಇದನ್ನು ಪಾಸ್ ಮಾಡುವುದಕ್ಕೆ ತಾವು ಮುಂದಾದರೆ ಅದಕ್ಕೆ ತೀವ್ರವಾದ ಪ್ರತಿಭಟನೆ, ಧರಣಿ, ಸತ್ಯಾಗ್ರಹ ಏನು ಮಾಡಬೇಕೋ ಮಾಡುತ್ತೇವೆ. ಬಹುಶಃ ಈ ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಮಾಡದಿರುವಂಥ ಪ್ರತಿಭಟನೆಯನ್ನು ನಾವು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಬಿಜೆಪಿ ಕಡೆಯಿಂದ ಮಾತ್ರವಲ್ಲ ಎಲ್ಲಾ ಪಕ್ಷದ ಸದಸ್ಯರುಗಳು ಸಹ ಈ ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ಇದೇ ವಿಷಯದ ಮೇಲೆ ಬಹಳ ದೀರ್ಘವಾದ ಚರ್ಚೆ ನಡೆದಿದೆ. ಆ ಬಗ್ಗೆ ಚರ್ಚೆಯಾದರೂ ಕೂಡ ಜಾಲಪ್ಪನವರು ಇನ್ನೂ ಕನವಿನ್ಸ್ ಆಗಿಲ್ಲ. ನೀವು ಹೇಳೋದು ಹೇಳಿ, ನಾವು ಮಾಡೋದು ಮಾಡುತ್ತೇವೆಂದು ಅವರು ಸದರಿ ಮಸೂದೆಯನ್ನು ಪಾಸ್ ಮಾಡಿಕೊಂಡರು. ಆದರೆ, ಇದರಿಂದ ದುಷ್ಪರಿಣಾಮ ಎಷ್ಟಿದೆಯೆಂಬ ಮಾತನ್ನು ನಾವು ಅನೇಕ ಸಲ ಅವರ ಗಮನಕ್ಕೆ ತಂದಿದ್ದೇವೆ ಮತ್ತು ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇವೆ. ಏಕೆಂದರೆ, ಇದರಲ್ಲಿ ವಿಶೇಷವಾಗಿ ಸೆಕ್ಷನ್ 48 (ಎ) ಆಗಲಿ, 63 ಆಗಲಿ, 79 ಆಗಲಿ, 109 ಆಗಲಿ ಇವೆಲ್ಲವೂ ಕೂಡ ರೈತರಿಗೆ ಮಾರಕವಾಗಿರತಕ್ಕ ಸೆಕ್ಷನಗಳಾಗಿವೆ. ಇದಕ್ಕೆ ತಾವು ತಿದ್ದುಪಡಿಯನ್ನು ತರಬೇಡಿ, ಇದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಏನೋ ಬಹಳ ಪ್ರಯತ್ನ ಪಟ್ಟು, ಈ ಸದನದಲ್ಲಿ ಒಮ್ಮತದಿಂದ ಪಾಸ್ ಮಾಡಿದಂಥ ಕಾನೂನು ಸುಮಾರು 23-25 ವರ್ಷಗಳ ಹಿಂದೆ ಏನಿತ್ತು, ಅಂತಹ ಕಾನೂನಿಗೆ ತಿದ್ದುಪಡಿ ತಂದು ಇವೊತ್ತು ಆ ಕಾನೂನು ಇಲ್ಲದ ರೀತಿಯಲ್ಲಿ ನೀವು ಮಾಡಿದ್ದೀರಿ. ಅಂದರೆ that has been completely smashed. ಇವೊತ್ತು ಅಸ್ತಿತ್ವದಲ್ಲಿಲ್ಲ. ಕಾನೂನಿಗೆ 109ನೇ ಸೆಕ್ಷನಗೆ ತಿದ್ದುಪಡಿ ಬಂದು ಅದರ ಸರ್ವನಾಶವಾಗಿದೆ. ಇಂತಹ ಒಂದು ಕಾನೂನಿನ 109ನೇ ಸೆಕ್ಷನಗೆ ತಿದ್ದುಪಡಿ ತಂದು ಕ್ರೂರ ಕಾನೂನಾಗಿ ಮಾಡಿದ್ದೀರಿ. ಈ ಕಾನೂನು ಬಗ್ಗೆ ಅಪ್ರಿಷಿಯೇಶನ್ ಬರೀ ನಾವು ಮಾಡುತ್ತೇವೆಂದಲ್ಲ, ತಾವು ಕೂಡ ಮಾಡಿದ್ದೀರಿ.

ಆದರೆ ಈಗಲೂ ಕೂಡ ನೀವು ಇಡೀ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದ ಭೂ ಸುಧಾರಣೆ

ಕಾನೂನು ಹೇಗೆ ಇವೆ ಎಂದು ಕೇಳಿದರೆ, ಎಲ್ಲರೂ ಅದು ಪ್ರಗತಿಪರವಾದ ಕಾನೂನು ಇದೆ, ರೈತರ ಪರ ಇವೆ, ಗೇಣಿದಾರರ ಪರ ಇವೆ ಮತ್ತು ಕರ್ನಾಟಕ ರಾಜ್ಯದ ಜನರಿಗೆ ಅನುಕೂಲವಾಗತಕ್ಕಂತಹ ರೀತಿಯಲ್ಲಿ ತಾವು ಒಳ್ಳೆಯ ಕಾನೂನನ್ನು ತಂದಿದ್ದೀರಿ ಎಂದು ಮಾರ್ಕ್ಸಿಸ್ಟ ಪಾರ್ಟಿಯಾಗಲಿ, ಅಥವಾ ಎಲ್ಲಾ ರೈತರ ಪರ ಇರತಕ್ಕಂತಹ ಜನ, ಟೆನೆಂಟ್ ಪರ ಇರತಕ್ಕಂತಹ ಜನ ಇದಕ್ಕೆ ಒಪ್ಪಿಕೊಂಡು ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ. ಅಂತಹ ಒಂದು ಕಾನೂನಿಗೆ ಇವತ್ತು ತಾವು ಪುನಃ ತಿದ್ದುಪಡಿಯನ್ನು ತಂದು ಅದು ಜನರ, ರೈತರ ವಿರುದ್ಧವಾಗಿರತಕ್ಕಂತಹ ದಿಕ್ಕಿನಲ್ಲಿ ತಾವು ಹೋಗುತ್ತಿದ್ದೀರಿ ದಯವಿಟ್ಟು ನಾನು ಮೊದಲೇ ತಮಗೆ ಕೇಳಿಕೊಂಡಿದ್ದೇವೆ. ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳಬೇಡಿ. ಹಿಂದೆ ನಾನು ಒಂದು ಮಾತು ಹೇಳಿದ್ದೆ, ಲ್ಯಾಂಡ್ ರೆವಿನ್ಯೂ ಆಕ್ಟಿಗೆ. ತಿದ್ದುಪಡಿ ತಂದಾಗ ನಾವೇ ಶ್ರೀಮಾನ್ ದೇವರಾಜಅರಸರವರು ನಮಗೆ ಸಲಹೆ ಕೊಟ್ಟ ಮೇಲೆ ತಕ್ಷಣ ಒಪ್ಪಿಕೊಂಡು ಆ ಸೆಕ್ಷನ್ ೯೫ಕ್ಕೆ ಎಂಟು ದಿವಸದಲ್ಲಿ ಅಮೆಂಡಮೆಂಟ್ ತಂದಿದ್ದೇವೆ. ಯಾವ ಕಾನೂನು ಅವರೇ ಮಾಡಿದ್ದರು. ಅವರಿಗೇ ಸರಿ ಇಲ್ಲ ಎಂದು ಅನ್ನಿಸಿದಾಗ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದಾಗ ನಾವು ಅದನ್ನು ಒಪ್ಪಿಕೊಂಡು ತಕ್ಷಣ ತಿದ್ದುಪಡಿತರತಕ್ಕಂಥ ಕೆಲಸ ಮಾಡಿದ್ದೆವು. ಹಾಗೆ ಇವತ್ತು ನಿಮ್ಮ ಮನಸ್ಸಿಗೆ ಬಹುಶಃ ಬಂದಿರಬಹುದು. ಆದರೂ ಕೂಡ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬಹುಶಃ ಏನಾದರೂ ಕಮಿಟಮೆಂಟ್ ಇದೆಯೋ ಏನೋ ಗೊತ್ತಿಲ್ಲ. ಸೆಕ್ಷನ್ 109 ತಿದ್ದುಪಡಿ ತಂದು ಹೋಟೆಲ್‌ಗಳಿಗೆ, ಹೌಸಿಂಗ್ ಕಾಂಪ್ಲೆಕ್ಸ್‌ಗಳಿಗೆ, ಹಾರ್ಟಿಕಲ್ಚರಿಗೆ ಮತ್ತು ಫ್ಲೋರಿಕಲ್ಚರಿಗೆ, ಇಂಡಸ್ಟ್ರೀಯಲ್ಲಿಸ್ಟರಿಗೆ ಮತ್ತು ಮಠ ಮಂದಿರ ಕಟ್ಟಿಸಿ ಕೊಡುವುದಕ್ಕೆ ನಾನು ಅನುಕೂಲ ಮಾಡಿ ಕೊಡುತ್ತೇನೆ ಎನ್ನುವ ಮಾತು ಏನಾದರೂ ತಾವು ಹೇಳಿದ್ದೀರೋ, ಏನೋ ಗೊತ್ತಿಲ್ಲ. ಅದಕ್ಕೆ ಬಹಳ ಇನಸಿಸ್ಟ ಮಾಡುತ್ತಿದ್ದೀರಿ. ಇದನ್ನು ತರದೇ ಇದ್ದರೆ ನಿಮಗೆ ಏನು ಲುಕ್ಸಾನು ಇಲ್ಲ. ಯಾವ ಬಂಡವಾಳಗಾರರೂ, ಯಾವ ಕ್ಯಾಪಿಟಲಿಸ್ಟ ಕೂಡ ತನ್ನ ಇಂಡಸ್ಟ್ರೀ ಇಲ್ಲಿ ಹಾಕಬೇಕೆಂದರೆ ಇಲ್ಲಿಗೆ ಬರುತ್ತಾರೆ, ಲಿಕ್ವಿಸಿಷನ್ ಕೇಳುತ್ತಾರೆ, ಕೆ.ಐ.ಡಿ.ಬಿ.ಯಲ್ಲಿ ಲಿಕ್ವಿಸಿಷನ್ ಕೇಳುತ್ತಾರೆ, ಮತ್ತು ಹೌಸಿಂಗ್ ಬೋರ್ಡ್‌ನಲ್ಲಿ ಕೇಳುತ್ತಾರೆ ಅಥವಾ ಲ್ಯಾಂಡ್ ಲಿಕ್ವಿಸಿಷನನಲ್ಲಿ ತಮ್ಮಲ್ಲಿ ದುಡ್ಡು ತುಂಬಿ ತೆಗೆದುಕೊಳ್ಳತಕ್ಕಂತಹ ಶಕ್ತಿ ಅವನಿಗೂ ಇದೆ, ಕೊಡತಕ್ಕಂತಹ ಶಕ್ತಿ ನಿಮಗೂ ಇದೆ. ಇಷ್ಟೆಲ್ಲಾ ವಿಧಾನ ಇದ್ದಾಗ ಕೂಡ ತಾವು ಈ ಒಂದು ವಿಧಾನವನ್ನು ಅನುಸರಿಸಿ ಈ ಕಾನೂನು ಬುಡಮೇಲೆ ಮಾಡತಕ್ಕಂಥಹ ಪ್ರಯತ್ನ ಏನು ಮಾಡುತ್ತಿದ್ದೀರಿ, ಇದು ಖಂಡಿತವಾಗಿ ಸರಿಯಲ್ಲ. ಪಕ್ಷ ಈಗ ಆದರೂ ತಾವು ಇದನ್ನು ಜಾಯಿಂಟ್ ಸೆಲೆಕ್ಟ ಕಮಿಟಿಗೆ ಕಳುಹಿಸಿ. ಏಕೆಂದರೆ ಅಲ್ಲಿ ಸೋತ ಮೇಲೆ..... ಇದು ಒಂದೇ ಅಲ್ಲ ಸಮಗ್ರವಾಗಿ ಚಿಂತನೆ ಮಾಡುವುದಕ್ಕೆ. ಎರಡನೆಯದು ಇದಕ್ಕೆ ಒಪ್ಪುವುದಿಲ್ಲ ಅಂದರೆ ಒಂದು ಹೌಸ್ ಕಮಿಟಿ ಮಾಡಿ ಅಲ್ಲಿ ಈ ರೈತರಿಗೆ ಹೇಗೆ ಅನುಕೂಲ ಮಾಡಿಕೊಡುವುದಕ್ಕೆ ವಿಚಾರ ಮಾಡೋಣ. ಇಲ್ಲ ಅಂದರೆ, ಇದು ಯಾವುದೂ ಬೇಡ, ತಲೆ ನೋವು ಬೇಡ ಅಂದರೆ ವಿತಡ್ರಾ ಆದರೂ ಮಾಡಿಕೊಳ್ಳಿ. ಇವು ಮೂರು ಪ್ರಪೋಸಲ್ ಕೊಟ್ಟಿದ್ದೇವೆ. ಇಲ್ಲ ಜಾಯಿಂಟ್ ಸೆಲೆಕ್ಟ ಕಮಿಟಿ, ಇಲ್ಲ ಹೌಸ್ ಕಮಿಟಿ ಇಲ್ಲ ಮಾಡಿಕೊಳ್ಳಿ ಇದು ಯಾವುದಕ್ಕೂ ತಾವು ಕೇಳುವುದಿಲ್ಲ ಅಂದರೆ ಇದು ಮೊಂಡುತನ ಆಗುತ್ತದೆ. ನಾವು ಮಾಡಿದ್ದೇ ಮಾಡುತ್ತೇವೆ. ನಮಗೆ ಮಜಾರಿಟಿ ಇದೆ, ಅಂತ ಹೇಳಿ ಇವತ್ತು ಬಹಳ ಪ್ರಯತ್ನ ಮಾಡಿದ್ದೀರಿ. ಇದಕ್ಕಾಗಿ ಪ್ರತಿಯೊಬ್ಬರಿಗೆ

ಫೋನ್ ಮಾಡಿ, ಪ್ರತಿಯೊಬ್ಬರಿಗೆ ಕೈಹಿಡಿದು ನೋಡಿ ಬಿಲ ಬರುತ್ತಿದೆ, ಬನ್ನಿ ಪಾಸ್ ಮಾಡಿಕೊಳ್ಳೋಣ ಎಂದು ಹೇಳಿದ್ದೀರಿ ಅದಕ್ಕಾಗಿ ಅವರ ಕಡೆಯ ಸದಸ್ಯರುಗಳನ್ನು ಬಂದು ಕೂರಿಸಿದ್ದಾರೆ. ಆದರೆ ನಾವು ಒತ್ತಾಯ ಮಾಡಿ ಹೋಗುವವರು ನಾವು. ಆದರೆ ಸಾಮಾನ್ಯವಾಗಿ ದಿನಾಲೂ ಕೊನೆಯವರೆಗೆ ನೀವು ನಾವು ಕೂತು ಹೋಗುತ್ತೇವೆ. ಅಂತಹವರಲ್ಲಿ ಇವತ್ತು ಅವರಲ್ಲ ಬಂದಿದ್ದಾರೆ ಎಂದರೆ ನಿಜವಾಗಿ ಶ್ರೀಮಂತರ ಪರವಾಗಿ ನಿಮಗೆ ಅಭಿಮಾನ ಇದೆ ಎಂದು ತೋರಿಸುತ್ತದೆ. ಈ ಭೂ ಸುಧಾರಣೆ ಕಾನೂನು ವಿರುದ್ಧ ನಿಮ್ಮ ಕಮಿಟಮೆಂಟ್ ಎಷ್ಟಿದೆ ಎಂದು ತೋರಿಸುತ್ತದೆ. ಇಂತಹ ಒಂದು ಕೆಟ್ಟ ಕಾನೂನು ಏಕೆ ನಿಮ್ಮ ಕೈಯಿಂದ ಪಾಸ್ ಮಾಡಿಸುತ್ತಿದ್ದೀರಿ? ನೀವು ಸೆಂಚುರಿ ಬ್ಯಾಟ್ಸಮೆನ ಆಗಿ ಈಗ 70 ವರ್ಷ ನಿಮಗೆ ಆಗಿದೆ, ಇನ್ನು 30 ವರ್, ಇರತಕ್ಕವರು. ಅದಕ್ಕೆ ಇಂತಹ ಸೆಂಚುರಿ ಬ್ಯಾಟ್ಸಮನ್ ಕೈಯಲ್ಲಿ ಇಂತಹ ಕೆಟ್ಟ ಕಾನೂನು ಮಾಡಿ ಯಾವ ಪಾಪ ರೈತರೂ, ಟೆನೆಂಟಗಳದು, ಬಡವರಿದಂ ತೆಗದುಕೊಳ್ಳಬೇಕೆಂದು ಇದ್ದೀರಿ. ಅದಕ್ಕೆ, ಅಧ್ಯಕ್ಷರೆ, ನಾನು ಪುನಃ ಕಳಕಳಿಯಿಂದ ತಮ್ಮಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ. ಇಂಥ ಒಂದು ಕೆಟ್ಟ ಕಾನೂನು ತಾವು ತರಬೇಡಿ, ಇದರಿಂದ ಬಡವರಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ನಾನು ಪುನಃ ಅವರಿಗೆ ಕೇಳಿಕೊಳ್ಳುತ್ತೇನೆ, ದಯವಿಟ್ಟು ಈ ಕಾನೂನನ್ನು ವಿತಡ್ರಾ ಮಾಡಿಕೊಳ್ಳಿ. ಇಲ್ಲ ಎಂದರೆ ಜಾಯಿಂಟ್ ಸಲೆಕ್ಟಕಮಿಟಿಗೆ ಕಳುಹಿಸಿ, ಇಲ್ಲ ಅಂದರೆ ಕೊನೆಗೆ ಹೌಸ್ ಕಮಿಟಿಗೆ ನಿಮಮ ಅಧ್ಯಕ್ಷತೆಯಲ್ಲಿ ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ನೀವು ಅನ್ಯಾಯ ಮಾಡುವ ಹಾಗಿಲ್ಲ, ಅವರಿಗೂ ಮಾಡುವುದಿಲ್ಲ, ನಮಗೂ ಮಾಡುವುದಿಲ್ಲ. ಕಾನೂನು ಏನು ಇದೆ ಆ ರೀತಿಯಾಗಿ ಮಾಡಿ ಅದಕ್ಕೂ ನಾವು ಒಪ್ಪಿಕೊಳ್ಳುತ್ತೇವೆ. ಅದಕ್ಕೆ ದಯವಿಟ್ಟು ತಾವು ಈಗಲಾದರೂ ವಾಪಸ್ ತೆಗದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇಲ್ಲ ಅಂದರೆ ಮುಂದಿನ ಕ್ರಮವನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಡೆಡ್ ಪಿಚನಲ್ಲಿ ಬೌಲಿಂಗ್ ಮಾಡುತ್ತಿದ್ದೀರಿ ನೀವು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಾನು ಎರಡು-ಮೂರು ವಿಷಯಗಳನ್ನು ತಮ್ಮ ಅಪ್ಪಣೆ ಪಡೆದು ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಇದನ್ನು ತಂದ ಉದ್ದೇಶ ಏನೆಂದರೆ ನಿಮ್ಮ ಕಾಲದಲ್ಲಿ ಕೆಲವು ಅಮೆಂಡಮೆಂಟ್ ತಂದಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಮೊನ್ನೆನೂ ಅದನ್ನು ಹೇಳಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಬಿಡಲಿಲ್ಲ ಹೊರಟು ಹೋದಿರಿ. ನೀವು ಯಾರೂ ಬಿಡಲಿಲ್ಲ ನಾನು ಹೇಳುವುದಕ್ಕೆ ಎಲ್ಲಾ ಬಂದು ನಿಂತುಕೊಂಡು ಬಿಟ್ಟರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಆಮೇಲೆ. ಈ ಕಾನೂನು ಸರ್ಕಾರ ಪಾಸ್ ಮಾಡುವುದಕ್ಕೆ ಬಿಡಬೇಡಿ ಇದು ಕೆಟ್ಟ ಕಾನೂನು ಇದೆ ಎಂದು ನಮಗೆ ಹೇಳಿ ಕೊಟ್ಟು ಪುನಃ ಈ ರೀತಿ ಹೇಳಿದರೆ ನಾವು ಏನು ಮಾಡುವುದು? ನಮಗೆ ಒಂದು ಕಡೆ ಹೇಳುವುದು ಇದು ಕೆಟ್ಟ ಕಾನೂನು, ಇದಕ್ಕೆ ಅಮೆಂಡಮೆಂಟ್ ತರುತ್ತಿದ್ದೇವೆ, ದಯವಿಟ್ಟು ಇದನ್ನು ನೀವು ಒಪ್ಪಬೇಡಿ, ಬಲವಂತ

ಮಾಡಿದ್ದಾರೆ, ದಯವಿಟ್ಟು ನನಗೆ ಸಹಾಯ ಮಾಡಿ ಎಂದು ಕೇಳಿಕೊಂಡು, ಇವತ್ತು ಈರೀತಿಯಾಗಿ ವಾದ ಮಾಡಿದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಂದೆ ಈಗ ಬಂದಿರತಕ್ಕಂತಹ ಮಸೂದೆ ಬಗ್ಗೆ ವಿವರಣಾತ್ಮಕವಾದ ವಿಮರ್ಶೆ ಆಗತ್ಯ ಎಂದು ನಾನು ಭಾವಿಸುತ್ತೇನೆ. ಅದರ ಅರ್ಥ ಪಾಸ್ ಮಾಡಿಕೊಂಡು ಹೋಗಬೇಕೆಂದು ಅಲ್ಲ. ಇದರ ಮೂಲ ಉದ್ದೇಶ ಏನು? ಹುಟ್ಟು ಬೆಳವಣಿಗೆ, ಈ ಭೂಸುಧಾರಣೆ ಕಾನೂನಿನ ಬಗ್ಗೆ ಇವತ್ತು ನಾನು ತಮ್ಮೂಲಾಗ್ರವಾಗಿರತಕ್ಕಂತಹ ವಿಚಾರವನ್ನು ಎಳೆ ಎಳೆಯಾಗಿ ಬಿಡುಸುವುದಕ್ಕೆ ಕಾಲದ ಅಭಾವದಿಂದ ಸಾಧ್ಯವಾಗದೇ ಇದ್ದರೂ ಕೂಡ ಮೂಲತಃ ಪ್ರಸ್ತಾಪವನ್ನು ನಾನು ಆ ದಿವಸ ಮಾಡಿದ್ದೇನೆ. ಅನೇಕ ಜನ ಮಾನ್ಯ ಸದಸ್ಯರು ಈಗಾಗಲೇ ಸದನದಲ್ಲಿ ಹೇಳಿದ್ದಾರೆ. ಮೂಲಉದ್ದೇಶವನ್ನು ಯಾವುದೇ ಸಂದರ್ಭದಲ್ಲಿ ಕೂಡ ನಾವು ಕಳೆದುಕೊಳ್ಳಬಾರದು. ಇವತ್ತು ಇಂಡಸ್ಟ್ರೀಯಲ್ ಡೆವಲಪಮೆಂಟ್ ಮತ್ತೊಂದು ಇದರ ಉದ್ದೇಶ ಎಂದು ಹೇಳತಕ್ಕಂಥದ್ದು ಇದ್ದರೂ ಕೂಡ ಅಪರೂಪವಾಗಿ ಬಂದಿರತಕ್ಕಂತಹ ಟೆನೆಂಟ್ಸ್ ಕ್ಲಾಸ್ ಏನು ಇದೆ ಆ ವರ್ಗಕ್ಕೆ ಗೇಣಿದಾರರ ವರ್ಗಕ್ಕೆ ಅಪರೂಪವಾಗಿ ಸಿಕ್ಕಿರತಕ್ಕಂತಹ ಆ ಒಂದು ಭೂ ಹಿಡುವಳಿ ಹಕ್ಕು ಅಥವಾ ಆಕ್ಯುಪೆನ್ಸಿ ಟೈಟ್ಸ್ under the Land Reforms Act ಏನು ಕನಫರ್ಮ್ ಆಗತಕ್ಕಂತಹ ಕಾನೂನು ಜಾರಿಗೆ ಬಂದಿತ್ತು, ದೇವರಾಜ ಅರಸರವರ ಕಾಲದಿಂದ ಅದರ ಮೂಲ ಉದ್ದೇಶಕ್ಕೆ ನಾವು ಇಂದು ವಿರುದ್ಧವಾಗಿ ಹೋಗತಕ್ಕಂತಹ ಕಾರ್ಯಕ್ರಮ ಹಾಕಬಾರದು. ಇವತ್ತು ಇಲ್ಲಿ ಬಹುಮತ ಅಥವಾ ಅಲ್ಪ ಮತದ ಪ್ರಶ್ನೆ ಅಲ್ಲ, ಪಾಸ್ ಮಾಡುವುದು ಬಹಳ ಸುಲಭ. ಹಿಂದೆ ಎಷ್ಟೋ ಸಾರಿ ಕೆಲವು ಕಾನೂನು ಪಾಸ್ ಮಾಡಿದ ಮೇಲೆ ತಪ್ಪು ಅಂತ ಗೊತ್ತಾಗಿದೆ. ಮತ್ತೆ ಅದಕ್ಕೆ ತಿದ್ದುಪಡಿ ಮುಖಾಂತರ ಸರಿಪಡಿಸಿರತಕ್ಕಂತಹ ಪ್ರಕರಣಗಳು ಕೂಡ ನಾವೆಲ್ಲಾ ತಂದಿದ್ದೇವೆ. ನಾನು ಈ ಸದನದ ಮತ್ತು ತಮ್ಮ ಗಮನಕ್ಕೆ ತರತಕ್ಕಂಥದ್ದು ಇಷ್ಟೆ, ಈಗಾಗಲೇ ಏರ್ಗೆಯವರು ಇದರ ಬಗ್ಗೆ ಎರಡು ಮೂರು ಸಲಹೆ ಕೊಟ್ಟಿದ್ದಾರೆ; I think there is lot of force in his arguments. ನನ್ನ ಭಾವನೆ ಇದು ಹರಿಬರಿಯಿಂದ ಮಾಡಿ ಅರ್ಜೆಂಟಾಗಿ ಇಂಡಸ್ಟ್ರೀ ಬರತಕ್ಕಂತಹ ಉದ್ದೇಶ ಯಾರಿಗೂ ಕೂಡ ಆಗುವುದಿಲ್ಲ. It is not that easy to find out the capital/although those persons concerned will find it easy to invest their money in industries round about Bangalore and some other cities also. ಅದಕ್ಕೆ ನಾನು ಹೇಳುವುದು, ಇದಕ್ಕೆ ಕಾಲ ಇದ್ದು ಸೂಕ್ಷ್ಮವಾಗಿ ವಿಚಾರ ಮಾಡಿ ಬದಲಾವಣೆಗಳು ಏನಾದರೂ ಆಗಬೇಕೆಂದಾಗ ವಿರೋಧ ಪಕ್ಷಗಳ ನಂಬಿಗೆ ತೆಗೆದುಕೊಳ್ಳಿ ಬಹಳ ಒಳ್ಳೆಯದು. ಮೂಲತಃ ಭೂ ಸುಧಾರಣಾ ಕಾನೂನಿನ ಮೂಲ ಉದ್ದೇಶಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನೀವು ತಿದ್ದುಪಡಿಯಲ್ಲಿ ತರುವುದರ ಮುಖಾಂತರ ಏನು ಪ್ರಗತಿಯನ್ನು ತಾವು ನಿರೀಕ್ಷೆ ಮಾಡುತ್ತಿದ್ದೀರಿ, ನೀವು ಅದನ್ನು ಮಾಡಬಹುದು ಎಂದು ನನ್ನ ಅನಿಸಿಕೆ. ಈಗಲಾದರೂ ಕೂಡ ಅದು ಸಾಧ್ಯ ಇದೆ. ಅದನ್ನು ನೀವು ಅನುಮಾನದಿಂದ ತಳ್ಳತಕ್ಕಂತಹ ಅವಶ್ಯಕತೆ ಇಲ್ಲ. ನಾನೂ ಕೂಡ ಆ ದಿವಸ ಮಾತನಾಡುವಾಗ ಹೇಳಿದೆ ಜಂಟಿ ಸಲಹಾ ಸಮಿತಿಗೆ ಇದನ್ನು ಕಳುಹಿಸಿಕೊಡಿ ತಪ್ಪು ಏನೂ ಆಗುವುದಿಲ್ಲ ಎಂದು. ಅಲ್ಲಿ ಎರಡು ಸದನದ ಮಾನ್ಯ ಸದಸ್ಯರುಗಳು ಎಲ್ಲಾ

ಪಕ್ಷಗಳಿಗೆ ಸೇರಿರತಕ್ಕಂತಹವರು ಅಲ್ಲಿರುತ್ತಾರೆ ಅವರ ಅಭಿಪ್ರಾಯಗಳನ್ನು ಅದನ್ನು ತೆಗೆದುಕೊಂಡು ಅಮೂಲಾಗ್ರವಾಗಿ ತನಿಖೆ ಆದ ಮೇಲೆ ಅವರ ಅಭಿಪ್ರಾಯ ನಮಗೆ ಮೂಲವಾಗಿ ಇರಲಿ, ಅಂತಿಮ ತೀರ್ಮಾನಕ್ಕೆ ನಾವು ಸದನದಲ್ಲಿ ಬರೋಣ. ಆ ಕಾಲದಲ್ಲಿ ಸರ್ವಾನುಮತದ ಒಪ್ಪಿಗೆ ತಮ್ಮತಿದ್ದುಪಡಿ ಮಸೂದೆ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಂಶವನ್ನು ನಾನು ಆ ದಿವಸ ಸೂಕ್ಷ್ಮವಾಗಿ ತಿಳಿಸಿದ್ದೆ. ಇನ್ನು ಅದು ಸಾಧ್ಯವಾಗಲಿಲ್ಲ, ಈಗಿರತಕ್ಕಂತಹ ತಿದ್ದುಪಡಿ ಮಸೂದೆಗೆ ಯಾವುದೇ ಒಂದು ಬದಲಾವಣೆ ಆಗಿರತಕ್ಕಂತಹ ಅಭಿಪ್ರಾಯವನ್ನು ಅಲ್ಲಿರತಕ್ಕಂತಹ ಕಲಮುಗಳಿಗೆ ತರತಕ್ಕಂತಹ ಉದ್ದೇಶ ನೀವು ಪಡೆಯಲಿಲ್ಲ ಎನ್ನುವ ಕಾರಣಕ್ಕಾಗಿ ಧರಣಿಗಳು ನಡೆದಿವೆ, ನಮ್ಮ ಪಕ್ಷವೂ ಕೂಡ ಅದರಲ್ಲಿ ಭಾಗವಹಿಸಿದೆ. ನಾನು ಅದಕ್ಕೆ ಹೇಳಿದ್ದು ಆ ಮೂಲ ಉದ್ದೇಶ ಬಿಟ್ಟು ನೀವು ಏನು ಮಾಡಿದ್ದೀರಿ ಎನ್ನುವ ವಿಚಾರ ಜನ ಕೇಳಿದಾಗ ಎರಡು ಎಕರೆ, ಮೂರು ಎಕರೆ, ಅರ್ಧ ಎಕರೆ, ಒಂದು ಎಕರೆ ಭೂಮಿ ಇಟ್ಟುಕೊಂಡಿರತಕ್ಕಂತಹ ವರ್ಗಗಳು ಅದು ಜತಿ ಆತೀತ ಆಗಿರತಕ್ಕಂತಹ ಎಂದು ವರ್ಗದ ದೃಷ್ಟಿಯಲ್ಲಿ ಇದೆ. ಶತಮಾನಗಳಿಂದ ಇದೆ. ಆ ದೃಷ್ಟಿಯಿಂದ ಅದರಲ್ಲೂ ಕೂಡ ಹರಿಜನ ಗಿರಿಜನರು, ಲಂಬಾಣಿಗಳು, ಭೋವಿಗಳು, ಹಿಂದುಳಿದ ವರ್ಗದವರು ಹೆಚ್ಚಾಗಿ ಎಲ್ಲಿದ್ದಾರೆ, ಪದ್ಧತಿಯಲ್ಲಿ ಅನುವಂಶಿಕವಾಗಿ ಬಂದಿರತಕ್ಕಂತಹ ಒಂದು ಪೀಳಿಗೆ ರೂಪದಲ್ಲಿ ಬಂದಿರತಕ್ಕಂತಹ ಒಂದು ವರ್ಗದ ಪ್ರಶ್ನೆ ಅದರಲ್ಲಿ ಅಡಗಿದೆ.

6.00 ಪಿ.ಎಂ.

ಇಲ್ಲಿ ಇರತಕ್ಕಂಥ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗಗಳು, ಇಲ್ಲಿರತಕ್ಕಂಥ ಪಂಗಡ ಈ ಒಂದು ದೃಷ್ಟಿಯಿಂದ ನಾವು ಆ ವರ್ಗಗಳಿಗೆ ಹಕ್ಕನ್ನು ಕೊಟ್ಟು ಸಮಾಜದಲ್ಲಿ ಮಾನಸಿಕವಾಗಿ ಮತ್ತೊಬ್ಬರ ಉಳಿಗತನ ಮಾಡಿಕೊಂಡು ಇರಬಾರದು ಎನ್ನತಕ್ಕಂಥ ಉದ್ದೇಶ, ಅದರಲ್ಲಿದೆ ಆದ್ದರಿಂದಲೇ ಇಷ್ಟೊಂದು ಸರ್ಕಾರದಮೇಲೆ ಒತ್ತಡ, ಪ್ರತಿಭಟನೆ ಇತ್ಯಾದಿಗಳು ಬರತಕ್ಕಂಥದ್ದು ಸಹಜವಾಗಿರತಕ್ಕಂಥ ಲಕ್ಷಣಗಳು, ಬೆಳವಣಿಗೆಗಳು ಪ್ರಜಾಪ್ರಭುತ್ವದಲ್ಲಿ ಬರುತ್ತವೆ. ಅದಕ್ಕೆ ಈಗಲೂ ಕೂಡ ಒಮ್ಮತದಿಂದ ಪಾಸ್ ಮಾಡಿದರೂ ಕೂಡ ಸಮಾಜದಲ್ಲಿ ನಾಳೆ ಜನರು ಎದುರು ಹೋಗಿ ನಿಲ್ಲೋದು ಅಷ್ಟು ಸುಲಭ ಆಗಲಾರದು. ಅದು ಈಗ ಗೊತ್ತಾಗುವುದಿಲ್ಲ. ದಕ್ಷಿಣ ಕನ್ನಡ, ಶಿವಮೊಗ್ಗ, ಕಾರವಾರ ಮತ್ತು ಕರ್ನಾಟಕ ಯಾವುದೇ ಮೂಲೆಯಲ್ಲಿರತಕ್ಕಂಥ ಜಮೀನ್ದಾರ ವರ್ಗ, ಹತ್ತು ಮಂದಿ ಇರತಕ್ಕಂಥ ವರ್ಗ ಏನು ಇರುತ್ತದಲ್ಲ ಅಲ್ಲಿಯೂ ಕೂಡ ಘಟ್ಟಾಗತಕ್ಕಂಥ ಸಂದರ್ಭ ಇದೆ. ಕ್ಯಾಂಡ್ ಸೀಲಿಂಗ್ ಜಾಸ್ತಿ ಮಾಡತಕ್ಕಂಥ ವಿಚಾರಗಳು, ಇತ್ಯಾದಿ ವಿಚಾರಗಳು ಕೂಡ ಅದರಲ್ಲಿ ಇರುವುದರಿಂದ ಜನಸಾಮಾನ್ಯರು ತಮ್ಮಲ್ಲಿ ಇರತಕ್ಕಂಥ ಭೂಮಿಯನ್ನು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಉಂಟಾಗಿದೆ. ನಾವು ಒಂದು ಕಡೆಗೆ ಅತಿಕ್ರಮಣ ಅಥವಾ ಬಗರ್ ಹುಕುಂ ಸಾಗುವಳಿ ಮಂಜೂರು ಮಾಡಿಕೊಳ್ಳುತ್ತಾ ಹೋಗುತ್ತೇವೆ. ಒಂದು ಎಕರೆ ಅಥವಾ ಅವನಿಗೆ ಕೊಟ್ಟು ಅವನು ತನ್ನ ಕಾಲಮೇಲೆ ತಾನು ನಿಲ್ಲತಕ್ಕಂಥ ಒಂದು ಪ್ರಾಮಾಣಿಕವಾದ ಪ್ರಯತ್ನಕ್ಕೆ ಅವಕಾಶ ಕೊಡತಕ್ಕಂಥ ಚಿಂತನೆ ಕಾನೂನು ಮುಖಾಂತರ ನಾವು ತಂದುಕೊಂಡಿದ್ದೇವೆ. ಇದಕ್ಕೆ ನಾವು ಎಲ್ಲಾ ಪಕ್ಷಗಳು ಬೆಂಬಲ ಕೊಟ್ಟೇ ನಾವು ಮಾಡಿದ್ದೇವೆ. ಈಗ

ಇರುವುದನ್ನು ಕೂಡ ಕಳೆದುಕೊಳ್ಳುವಂಥ ಒಂದು ವಿಚಾರಕ್ಕೆ ಹೋಗಿಬಿಟ್ಟರೆ ಇವೊತ್ತು ಮೌಢ್ಯತನದಲ್ಲಿ ಹುಟ್ಟಿ ಬೆಳೆದು ಬಂದಿರತಕ್ಕಂಥ ವರ್ಗ ಒಂದು ಎಕರೆ ಹಿಡಿತದಲ್ಲಿದ್ದರೂ ಕೂಡ ಅದು ಉಳಿಯಲಾರದು ಎಂದು ಹೆದರಿಕೆ ನಮ್ಮ ಮನಸ್ಸಿನಲ್ಲಿ ಉದ್ದಕ್ಕೂ ಕೂಡ ಬಂದುಬಿಟ್ಟಿದೆ. ಆದಕಾರಣ ನಾನು ಅಧ್ಯಕ್ಷರ ಮುಖಾಂತರ ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಏನೂ ತಪ್ಪೇನೂ ಆಗುವುದಿಲ್ಲ ಮತ್ತೆ ನಾವು ಸಭೆ ಸೇರುತ್ತೇವೆ. ಇವೊತ್ತು ನಾಳೆ, ನಾಡಿದ್ದು ನಾವು ಹೌಸ್ ಅಡ್ವರ್ನ್ ಮಾಡಿದರೆ, ತಾವು ಯಾವ ಸಮಿತಿಯನ್ನಾದರೂ ರಚನೆ ಮಾಡಿ, ನೀವು ಯಾವ ಸಮಿತಿಗೆ ಒಪ್ಪಿಗೆ ಕೊಡುತ್ತೀರೋ ಅದೇ ಸಮಿತಿಗೆ ಒಪ್ಪಿಗೆ ಕೊಡಿ. ಆಮೂಲಾಗ್ರವಾಗಿರತಕ್ಕಂಥ ಆ ಒಂದು ವಿವರಣಾತ್ಮಕ ಅಭ್ಯಾಸವಾಗಿ ಒಂದು ವರದಿ ತಮ್ಮ ಮುಂದೆ ಬರಲಿ ಮಾನ್ಯ ಸಭಾಧ್ಯಕ್ಷರೇ, ಆಗ ಒಪ್ಪಿಗೆ ಕೊಡತಕ್ಕಂಥ ವಿಚಾರ ಮಾಡೋಣ. ಆದರೆ ಈ ಮಧ್ಯೆ ತರಾತುರಿಯಲ್ಲಿ ತೂರಿಸತಕ್ಕಂಥ ಅವಶ್ಯಕತೆ ಬೇಡ. ಇವೊತ್ತು ಆ ಸದನ ರಿಜೆಕ್ಟ್ ಮಾಡೋದು ಬಿಡೋದು ಬೇರೆ ವಿಷಯ. ಆ ವಿಷಯದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾನೂನು ಪ್ರಕಾರ ಅವಕಾಶ ಇರುವುದರಿಂದ ಮತ್ತೊಂದು ಸಾರಿ ತಾವು ತಂದಿದ್ದೀರಿ, ಆದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಮುಂದೆ ಬಂದಾಗ ಅಭಿಪ್ರಾಯಗಳ ಆಧಾರದ ಮೇಲೆ ಇದನ್ನು ವಿರೋಧ ಮಾಡುವುದು ನಮ್ಮ ಆದ್ಯ ಕರ್ತವ್ಯದ ಪ್ರಶ್ನೆಯಾಗುತ್ತದೆ. ಇವೊತ್ತು ತಾವು ಯೋಚಿಸಿ ಜಂಟಿ ಸಲಹಾ ಸಮಿತಿಗೆ ಒಪ್ಪಿಗೆ ಕೊಟ್ಟರೆ ಬಹಳ ಒಳ್ಳೆಯದು. ಇದನ್ನು ಹಿಂದಕ್ಕೆ ಪಡೆದುಕೊಂಡು ಮತ್ತೊಮ್ಮೆ ತರತಕ್ಕಂಥ ವಿಚಾರ ಕೂಡ ತಾವು ಮಾಡಬಹುದು. ಎಲ್ಲಾ ವಿರೋಧಪಕ್ಷಗಳ ಸಭೆ ಕೂಡ ತಾವು ಕರೆಯಬಹುದು. ಆದರಲ್ಲಿ ತಪ್ಪೇನು ಇಲ್ಲ. ಎಲ್ಲರನ್ನು ಕರೆಯಿರಿ ತಾವು. ಮಾತುಕತೆ ಮಾಡಿ, ನಂಬಿಕೆ ತೆಗೆದುಕೊಳ್ಳಿ, ತೆಗೆದುಕೊಂಡು ನೀವು ಮಾಡಿ. ಇಲ್ಲದೇ ಇದ್ದರೆ ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಖರ್ಗೆಯವರು ಹೇಳಿದ ರೀತಿಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ತಮಗೆ ಎಷ್ಟು ಜನ ಸದಸ್ಯರು ಬೇಕು ಅಷ್ಟು ಸದಸ್ಯರನ್ನು ಹಾಕಿಕೊಳ್ಳಿ. ಇದರಲ್ಲಿ ಬಹುಮತ ತೆಗೆದುಕೊಳ್ಳುವ ಪ್ರಶ್ನೆ ಇಲ್ಲ. ಅಭಿಪ್ರಾಯ ತೆಗೆದುಕೊಂಡು ವಿಚಾರ ವಿನಿಮಯ ಮಾಡಿಕೊಂಡು ಆ ಮೇಲೆ ತಿದ್ದುಪಡಿ ಬಗ್ಗೆ ತಾವು ಕೂಲಂಕಷವಾಗಿ ವಿಚಾರ ಮಾಡತಕ್ಕಂಥ ಅವಶ್ಯಕತೆ ಇದೆ. ಆದರೆ ಹೀಗೆನೇ ತಂದು ಪಾಸ್ ಮಾಡಿಕೊಂಡು ಹೋಗುತ್ತೇವೆ ಎಂದು ಹೇಳಿದರೆ ಅದು ಎಷ್ಟು ಒಳ್ಳೆಯದಾಗುವುದಿಲ್ಲ. ಅದಕ್ಕೆ ನಮ್ಮ ಪಕ್ಷದ ವಿರೋಧ ಇದೆ. ಬೇರೆಯವರೂ ಇದೆ, ಅನೇಕ ಜನರದ್ದು ಇದೆ. ನಾಳೆ ನಿಮಗೆ ಹೊರಗಡೆ ಕೂಡ ಜನರ ವಿರೋಧ ಇರುತ್ತದೆ ಎನ್ನತಕ್ಕಂಥ ಎಚ್ಚರಿಕೆ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ. ಆ ರೀತಿ ಇರತಕ್ಕಂಥ ಅಂಶವನ್ನು ತಮ್ಮ ಗಮನಕ್ಕೆ ತಂದು ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸುದೀರ್ಘವಾಗಿ ಇಲ್ಲಿ ಚರ್ಚೆ ಆಗಿದೆ. ವಿಧಾನ ಪರಿಷತ್ತಿನಲ್ಲಿ ತಿರಸ್ಕೃತವಾಗಿ ಇಲ್ಲಿ ಬಂದಿರುವುದರಿಂದ ಮತ್ತೆ ಇಲ್ಲ ಮಂಡಿಸಿ ಒಪ್ಪಿಗೆ ತೆಗೆದುಕೊಳ್ಳತಕ್ಕಂಥ ಅವಕಾಶ ದೊರಕಿದೆ. ಆದರೆ ಅವಕಾಶಕ್ಕಿಂತ ಹೆಚ್ಚಾಗಿ ಒಂದು ಆತ್ಮ ಶೋಧನೆ ಇಲ್ಲಿ ಅತಿ ಮುಖ್ಯ. ಆತ್ಮ ಶೋಧನೆ ಆಗಲಿಲ್ಲ ಎಂದರೆ ನಾವು

ನಿಜವಾಗಿಯೂ ಒಂದು ರೀತಿ ಸಮಾಜಕ್ಕೆ ಮತ್ತು ಒಂದು ತತ್ವ ನೀತಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ಈ ತಿದ್ದುಪಡಿ ಸುಧಾರಣೆಯ ಬಗ್ಗೆ, ಈ ಭೂ ಸುಧಾರಣೆ ತರುವುದರ ಬಗ್ಗೆ ಅನೇಕರ ಶ್ರಮ ಬಹಳ ಇದೆ. ಇದಕ್ಕೆ ಒಂದು ದೊಡ್ಡ ಇತಿಹಾಸ ಇದೆ. ಇದಕ್ಕೊಂದು ಚರಿತ್ರೆ ಇದೆ. ಇವೆಲ್ಲವನ್ನು ಗಮನಕ್ಕೆ ಇಟ್ಟುಕೊಳ್ಳದೇನೆ ಇವೆಲ್ಲವನ್ನು ಮೂಲೆಗುಂಪು ಮಾಡಿ ಒಂದು ಹತಮಾರಿತನದಿಂದ ಸರ್ಕಾರ ಇದನ್ನು ತರುತ್ತಿದೆ. ಹಾಗೂ ನೀವು ಏನೇ ಮಾಡಿ, ಧರಣಿ ಮಾಡಿ ನಾವು ಮಾತ್ರ ಛಲಿ ಮತದಲ್ಲಿ ಒಪ್ಪಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳುವಂತಿದೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನಾನು ನಿಮ್ಮನ್ನು ವಾದ ವಿವಾದಕ್ಕೆ ಎಳೆಯುತ್ತಿಲ್ಲ. ಇವತ್ತಾದರೂ ನಾವು ಧರಣಿ ಮಾಡುವ ನಿರ್ಧಾರಕ್ಕೆ ಬರುತ್ತೇವೆ, ಬರುವಂಥ ಅವಕಾಶ ಇದೆ. ಧರಣಿ ಮಾಡಿದಾಗ ಇದು ಸಭೆ ಸಭೆಯಲ್ಲ, ಈ ಸಭೆ ಧರಣಾ ಮಾಡುವುದರಿಂದ ಈ ಮಸೂದೆ ಆಗುವುದಿಲ್ಲ ಎಂದು ತಾವು ಮಹತ್ತರವಾದ ತೀರ್ಪನ್ನು ತಾವು ಕೊಡಬೇಕೆಂದು ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ. ಅದಕ್ಕಾಗಿ ತಮಗೆ ನಾನು ಹೇಳುವುದೇನೆಂದರೆ, ದೇವರಾಜ್ ಅರಸರವರನ್ನೂ ತಾವು ನೋಡಿದ್ದೀರಿ, ಮತ್ತು ಅವರ ಹಿಂದೆ ಇರತಕ್ಕಂಥ ಶಾಂತವೇರಿ ಗೋಪಾಗೌಡರ ವಿಚಾರ ಕೇಳಿದ್ದೀರಿ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಮನೆತನದ ಹೋರಾಟ, ಕಾಗೋಡು ತಿಮ್ಮಪ್ಪನವರ ಮನೆತನದ ಹೋರಾಟ ಎಂದರೆ ಅದಕ್ಕೊಂದು ದೊಡ್ಡ ಇತಿಹಾಸ ಇದೆ. ಈ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಹೋರಾಟ ನಡೆಯಿತು ಹೇಗೆ ನಡೆಯಿತು ಎಂಬುದರ ಬಗ್ಗೆ ಖಾದ್ರಿ ಶಾಮಣ್ಣನವರು ಹೇಳುತ್ತಿದ್ದರು. ಇದಕ್ಕೋಸ್ಕರವಾಗಿ ಜೀವನ ಸವರಿಸಿ, ತ್ಯಾಗ ಮಾಡಿ ಮುಡಿದಂಥ ಅನೇಕ ಇತಿಹಾಸಗಳು ಇವೆ. ಮತ್ತೇ ಶ್ರೀಮಾನ್ ಜಾಲಪ್ಪನವರ ಬಗ್ಗೆ ಅಪಾರವಾದಂಥ ಹೆಸರು ರಾಜ್ಯದಲ್ಲಿ ಬರುತ್ತಿದೆ. ಅವರ ಇಲಾಖೆಯ ಬಗ್ಗೆ ಅವರು ತೆಗೆದುಕೊಳ್ಳತಕ್ಕಂಥ ನಿರ್ಧಾರಗಳ ಬಗ್ಗೆ. ಕೆಲವು ಸಾರಿ ಅವರ ಮಾತುಕತೆ ಬೇರೆ ಕೆಲವು ಸಾರಿ ಕೋಪದಲ್ಲಿದ್ದಾಗ, ಚಚ್ಚಿ, ಹೊಡೆಯಿರಿ ಎಂದು ಹೇಳುತ್ತಾರೆ ಆ ವಿಚಾರ ಬೇರೆ. ಆದರೆ ಒಟ್ಟಾರೆ ಅಭಿಪ್ರಾಯ ತೆಗೆದುಕಂಡಾಗ ಸ್ವಲ್ಪ ಜಾಲಪ್ಪನವರ ಬಗ್ಗೆ ಕಳಕಳಿ ಇದೆ. ಆದರೆ ಈ "ಕರಾಳ ದಿವಸ" ತರುವುದರಿಂದ ಅವರು ಮಾಡಿದಂಥ ಎಲ್ಲದಕ್ಕೂ ತಿಲಾಂಜಲಿಯಾಗುತ್ತದೆ. ಅದಕ್ಕಾಗಿ ಈ ಪಾಪದ ಕೆಲಸವನ್ನು ನೀವು ಏತಕ್ಕೆ ಮಾಡುತ್ತೀರಿ ಮಾನ್ಯ ಜಾಲಪ್ಪನವರೇ? ನೀವು ಮಂತ್ರಿಗಳಾಗಿರಬೇಕೆಂಬುದು ನನ್ನ ಇಚ್ಛೆ. ಒಂದು ವೇಳೆ ಸರ್ಕಾರ ಈ ವಿಚಾರದಲ್ಲಿ ಒತ್ತಾಯ ಮಾಡಿದರೆ ತಾವು ರಾಜೀನಾಮೆ ಕೊಟ್ಟು ಹೊರಗೆ ಹೋದರೆ ನೀವು ಇತಿಹಾಸದಲ್ಲಿ ಉಳಿಯುತ್ತೀರಿ. ನೋಡಿ ಯೋಚನೆ ಮಾಡಿ ಏಕೆಂದರೆ ನೀವು ರಾಜೀನಾಮೆ ಕೊಡೋದು ಬಿಡೋದು ತಮಗೆ ಸೇರಿದ್ದು. ನನಗೇನು ನೀವು ಕೊಟ್ಟು ನಾನು ಸಂತೋಷ ಪಡಬೇಕು ಅಥವಾ ನಿಮ್ಮ ಸ್ಥಾನಕ್ಕೆ ನಾನು ಬರಬೇಕೆಂದೇನಿಲ್ಲ. ನೀವು ಒತ್ತಾಯಕ್ಕೆ ಮಣಿದಿದ್ದರೆ ದಯಮಾಡಿ ಇಂತಹ ಒಂದು ತಿದ್ದುಪಡಿ ಮಸೂದೆಯನ್ನು, ಕರಾಳ ಮಸೂದೆಯನ್ನು ರೈತರಿಗೆ ಅನ್ಯಾಯ ಆಗತಕ್ಕಂಥ ಅತ್ಯಂತ ಘೋರ ಮಸೂದೆಯನ್ನು ನನ್ನ ಕೈಯಿಂದ ನಾನು ಮಂಡಿಸೋದಕ್ಕೆ ಸಾಧ್ಯವಿಲ್ಲವೆಂದು ಹೇಳಿ ತಾವು ರಾಜೀನಾಮೆ ಕೊಟ್ಟರೆ ಕರ್ನಾಟಕದ ಇತಿಹಾಸದಲ್ಲಿ ಶಾಂತವೇರಿ ಗೋಪಾಲಗೌಡರಷ್ಟೆ ಇತಿಹಾಸದಲ್ಲಿ ನೀವು ಹೋಗುತ್ತೀರಿ. ದೇವರಾಜ್ ಅರಸರವರಷ್ಟೇ ಇತಿಹಾಸದಲ್ಲಿ ಹೋಗುತ್ತೀರಿ, ಒಂದು ದೊಡ್ಡ ಇತಿಹಾಸ ನಿರ್ಮಾಣ ಆಗುತ್ತದೆ ಏನ್ನತಕ್ಕಂಥ ಮಾತನ್ನು

ತಮಗೆ ಹೇಳುತ್ತೇನೆ. ಅಧ್ಯಕ್ಷರೇ ನನ್ನ ಮನವಿಯನ್ನು ತಮಗೆ ತಿಳಿಸಿದ್ದೇನೆ. ತಾವು ಮುಂದೆ ಆಗತಕ್ಕಂಥ ಕ್ರಿಯೆಗೆ ತಮ್ಮ ಪ್ರತಿಕ್ರಿಯೆ ಏನು ಎಂದು ನಾನು ಮುಂದೆ ನೋಡಬೇಕಾಗಿದೆ ಅಷ್ಟೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇಲ್ಲಿ ಮುಖ್ಯವಾಗಿರತಕ್ಕಂಥ ಪ್ರಶ್ನೆ ಮೇಲ್ಮನೆಯಲ್ಲಿ ಇದು ತಿರಸ್ಕಾರವಾಗಿ ಕೆಳಮನೆಯಲ್ಲಿ ಪುನಃ ಬಂದಿದೆ. ಇದು ಪ್ರಜಾಪ್ರಭುತ್ವದ ಪ್ರಶ್ನೆ. ನಮ್ಮ ಬಹುಮತ ಇದೆ ನಾವು ಬಿಲ್ಲನ್ನು ಪಾಸ್ ಮಾಡುತ್ತೇವೆಂದು ಹೇಳುತ್ತಾರೆ. ಇಲ್ಲಿ ನಾವು ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇವರಿಗೆ ಜನ ಅಧಿಕಾರ ಕೊಟ್ಟಿದ್ದಾರೆ. ಇವರು ಜನರ ಹತ್ತಿರ ಹೋಗಿ ಅಧಿಕಾರವನ್ನು ಕೇಳತಕ್ಕಂಥ ಸಂದರ್ಭದಲ್ಲಿ ನಾವು ಈ ಭೂಸುಧಾರಣೆ ಮಸೂದೆಯನ್ನು ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿ ಜನರ ಹತ್ತಿರ ಅವರು ಕೇಳಲಿ. ಆ ರೀತಿ ಅವರು ಜನರ ಹತ್ತಿರ ಕೇಳಿ ಬಂದಿದ್ದರೆ ಅವರಿಗೆ ತಿದ್ದುಪಡಿ ಮಾಡುವಂಥದ್ದು ಖಂಡಿತವಾಗಿ ನೈತಿಕವಾದಂಥ ಅಧಿಕಾರ ಇದೆ. It is not the mandate of the people to reform the Bill. They don't get the mandate from the people to amend the Land Reforms Act. At the time of election, ಇವರು ಜನರ ಹತ್ತಿರ ಹೋದಾಗ ಆ ರೀತಿ ಹೇಳಲಿಲ್ಲ. ಆದರೆ ನಮಗೆ ಮೆಜಾರಿಟಿ ಇದೆ, ನಾವು ಅದನ್ನು ತಿದ್ದುಪಡಿ ಮಾಡುತ್ತೇವೆಂದು ಹೇಳತಕ್ಕಂಥದ್ದು ಪ್ರಜಾಪ್ರಭುತ್ವದ ಮೂಲ ನಿಯಮಕ್ಕೆ ವಿರೋಧ. ಮಾನ್ಯ ಸಭಾಧ್ಯಕ್ಷರೇ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಈಗಾಗಲೇ ನಾನು ಸಾಕಷ್ಟು ಹೇಳಿದ್ದೇನೆ. ಇದು ಭೂಮಿ ಮತ್ತು ಮನುಷ್ಯರ ಮಧ್ಯೆ ಇರತಕ್ಕಂಥ ಭಾವನಾತ್ಮಕವಾದ ಸಂಬಂಧ. ಯಾಂತ್ರಿಕವಾಗಿ ಮಾರವಾಡಿ ರೀತಿಯಲ್ಲಿ ಹಣ ಲೆಕ್ಕ ಹಾಕತಕ್ಕಂಥ ಸಂಬಂಧ ಅಲ್ಲ ಇದು. ಈ ದೇಶದಲ್ಲಿ ಭೂ ಸುಧಾರಣಾ ಕಾನೂನನ್ನು ತರಬೇಕಾದರೆ ದೊಡ್ಡ ಇತಿಹಾಸ ಇದೆ. ೧೯೪೨ನೇ ಇಸವಿಯಿಂದಷ್ಟೇ ಅಲ್ಲ, ೧೮೦೯ನೇ ಇಸವಿಯಲ್ಲಿ ಮೊಟ್ಟಮೊದಲಿಗೆ ಜಮೀನ್ದಾರಿ ವ್ಯವಸ್ಥೆ ವಿರುದ್ಧ ಭಾರತ ದೇಶದಲ್ಲಿ ಹೋರಾಟ ಪ್ರಾರಂಭವಾಗಿ ೧೯೪೭ರ ತೆಲಂಗಣಾ ಹೋರಾಟದಲ್ಲಿ ಅಂತ್ಯವಾಗಿರತಕ್ಕಂಥದ್ದು. ಇದರ ಮಧ್ಯೆ ಪುನ್ನಪುರ ಫೈರಾದದಲ್ಲಿ ನಡೆದಂಥ ಡಿಲ್ಲಿ ಹೋರಾಟ, ಕೇಬಾದಸಲ್ಲಿ ನಡೆದಂಥ ಭೂಮಿ ಹೋರಾಟ, ಸುರ್ಮಾಗಾಲಿನಲ್ಲಿ ನಡೆದ ಭೂಮಿ ಹೋರಾಟ, ಇಡೀ ಭಾರತ ದೇಶದ ಇತಿಹಾಸದಲ್ಲಿ ಭೂಮಿ ಉಳುವವನಿಗೆ ಬೇಕು ಎನ್ನತಕ್ಕಂಥ ನೂರಾರು ವರ್ಷಗಳ ತ್ಯಾಗ, ಬಲಿದಾನಗಳ ಇತಿಹಾಸದಿಂದ ಬಂದಿರತಕ್ಕಂಥ ಭೂ ಸುಧಾರಣಾ ಕಾನೂನು ಇದೆ. ಈ ಇತಿಹಾಸವನ್ನು ತಿರಸ್ಕರಿಸತಕ್ಕಂಥ ಹಕ್ಕು ಈ ದೇಶದಲ್ಲಿ ಯಾರಿಗೂ ಇಲ್ಲ. ಇದು ಭೂಮಿಯ ಬಗ್ಗೆ ಇರತಕ್ಕಂಥ ಭಾವನಾತ್ಮಕವಾದಂಥ ಸಂಬಂಧ. ನಾಲ್ಕು ಸಾವಿರ ಜನ ಪುನ್ನಪುರ ಫೈಲಾರದ ವಿರುದ್ಧ ಹೋರಾಟ ಮಾಡುವಾಗ ಪ್ರಾಣವನ್ನು ತೆತ್ತಿದ್ದಾರೆ. ತೆಲಂಗಣಾ ಹೋರಾಟದಲ್ಲಿ ಐದು ಸಾವಿರ ಜನ ಬಂದೂಕುಗಳನ್ನು ಹಿಡಿದು ರಜಾಕಾರರ ವಿರುದ್ಧ ಹೋರಾಟ ಮಾಡಿ, ಜಮೀನ್ದಾರರ ವಿರುದ್ಧ ಹೋರಾಟ ಮಾಡಿರತಕ್ಕಂಥದ್ದು. ಮೂರು ಸಾವಿರ ಜನ ಪ್ರಾಣವನ್ನು ತೆತ್ತು ಬಂಗಾಳದ ಜಮೀನ್ದಾರರ ವಿರುದ್ಧ ಹೋರಾಟ ಮಾಡಿರತಕ್ಕಂಥದ್ದು. ಅಸ್ಸಾಂನಲ್ಲಿ ಸುಮಾರ್ಗಾಲಿಯಲ್ಲಿ ಜಮೀನ್ದಾರರ ವಿರುದ್ಧ ಇತಿಹಾಸ ಪ್ರಸಿದ್ಧ ನಡೆದಂಥ ಹೋರಾಟ ಇದು. ಎಲ್ಲಾ ಹೋರಾಟಗಳ ಪ್ರತಿಫಲ ಈ ದೇಶದಲ್ಲಿ ಪೂಜೆ

ಮಾಡತಕ್ಕಂಥ ದಿವಂಗತ ವಿನೋಭಾ ಭಾವೆಯವರು ಭೂದಾನ ಚಳುವಳಿಯನ್ನು ಪ್ರಾರಂಭ ಮಾಡಿದರು. ಕನಿಷ್ಪ ಗೌತ್ತಾಗಬೇಕು ಅವರಿಗೆ. ವಿನೋಭಾ ಭಾವೆಯವರಂಥ ಎತ್ತರದ ವ್ಯಕ್ತಿ ಭಾರತ ದೇಶದಲ್ಲಿ ಭೂದಾನ ಚಳುವಳಿ ಮಾಡಿದಕ್ಕೆ ಕಾರಣ ಏನೆಂದರೆ ಹೇಳತಕ್ಕಂಥದ್ದು. ಇವ್ಯಾತ್ತು ಬರೀ ಬಂಡವಾಳ ದೃಷ್ಟಿಯಿಂದ ವ್ಯಾಪಾರ ದೃಷ್ಟಿಯಿಂದ ಮೂಲ ಮಸೂದೆಯನ್ನು ತಿದ್ದುಪಡಿ ಮಾಡಿ, ನಮಗೆ ದುಡ್ಡು ಸಿಗುತ್ತದೆ ಎನ್ನತಕ್ಕಂಥ ಪ್ರಶ್ನೆಯಲ್ಲ. ಆದ್ದರಿಂದ ಮತ್ತೆ ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಇವರಿಗೆ ಮೆಜಾರಿಟಿ ಇದೆ ನಾವು ಬಿಲ್ಲು ಪಾಸ್ ಮಾಡುತ್ತೇವೆ ಎಂದು ಹೇಳಿದರೆ ನಾನು ಮತ್ತೆ ಹೇಳುತ್ತೇನೆ, ಭೂಸುಧಾರಣೆ ಕಾನೂನು ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿದಕ್ಕೆ ಜನ ಇವರಿಗೆ ಓಟು ಕೊಟ್ಟಿಲ್ಲ ಆದಕಾರಣ ಮೆಜಾರಿಟಿಯಿದ ಈ ಕಾಯಿದೆಯನ್ನು ತಿದ್ದುಪಡಿ ಮಾಡುವಂಥ ನೈತಿಕವಾದಂಥ ಹಕ್ಕು ಇವರಿಗೆ ಪ್ರಜಾಪ್ರಭುತ್ವದಲ್ಲಿ ಬರುವುದಿಲ್ಲ. ಆದ್ದರಿಂದ ಈ ಕರಾಳ ಶಾಸನದಿಂದ ಈ ದೇಶದಲ್ಲಿರತಕ್ಕಂಥ ಬಂಡವಾಳಗಾರರು, ಈ ದೇಶದಲ್ಲಿ ಇರತಕ್ಕಂಥ ಬ್ಲಾಕ್ ಮಾರ್ಕೆಟಗಾರರು, ಈ ದೇಶದಲ್ಲಿ ಕಪ್ಪು ಹಣವನ್ನು ಕೂಡಿಟ್ಟಿರತಕ್ಕಂಥವರಿಗೆ ಭೂಮಿಯನ್ನು ಕೊಂಡುಕೊಳ್ಳತಕ್ಕಂಥ ಅಧಿಕಾರವನ್ನು ಕೊಡುತ್ತಿದ್ದೀರಿ, ಭಾರತ ದೇಶದ ಇತಿಹಾಸದಲ್ಲಿ ಜಮೀನ್ದಾರರ ವಿರುದ್ಧ ಹೋರಾಟ ಮಾಡಿದಂಥ ಜನ, ಆ ಜಮೀನ್ದಾರರು ಹೋಗಿ, ಬಂಡವಾಳ ಶಾಹಿ ಜಮೀನ್ದಾರರನ್ನು ಖುಷಿ ಮಾಡತಕ್ಕಂಥ ಈ ಭೂಸುಧಾರಣಾ ಕಾನೂನು ತಿದ್ದುಪಡಿ ಏನು ಇದ ಇದು ಜನವಿರೋಧಿ ತಿದ್ದುಪಡಿ, ಇಡೀ ದೇಶದಲ್ಲ ಒಂದು ಕರಾಳ ಶಾಸನವನ್ನು ಇವರು ಬರೆಯುತ್ತಿದ್ದಾರೆ, ಆದ್ದರಿಂದ ಯಾವುದೇ ಕಾರಣದಿಂದ ನಾವು ಇದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೇ, ರೈತರ ಪಾಲಿಗಂತೂ ಇದು ಬಹಳ ಕರಾಳ ಶಾಸನ. ನಮ್ಮ ಅಯ್ಯ ಒಂದು ಮಾತನ್ನು ಹೇಳುತ್ತಿದ್ದ. ನೀನು ಏನು ಬೇಕಾದರು ಮಾಡು ಆದರೆ ಈ ಜಮೀನನ್ನು ಮಾತ್ರ ಮಾರಬೇಡ ಎಂದು ಅವರು ಸಾಯುವ ಕಾಲಕ್ಕೆ ನನ್ನಿಂದ ಪ್ರಮಾಣ ವಚನವನ್ನು ಸ್ವೀಕರಿಸಿದರು. ಆದರೆ ನಮ್ಮ ಅಯ್ಯನವರಿಗೆ ಇರತಕ್ಕಂಥದ್ದು ಜಾಲಪ್ಪನವರಿಗೆ ಇಲ್ಲ. ಇದ್ಯಾಕೆ ಇಂಥ ಬುದ್ಧಿ ಬಂತು ಎಂದು ನನಗೆ ಗೊತ್ತಾಗುತ್ತಿಲ್ಲ. ಅವರೊಂದು ಮಾತನ್ನು ಹೇಳಿದರು ನೀವು ಏನಾದರೂ ಮಾತನಾಡಿ, ನಾವು ಮಾತ್ರ....

ಶ್ರೀ ಆರ್.ಎಲ್. ಜಾಲಪ್ಪ : ನಿಮಗೆ ತರಿ ಭೂಮಿ ಎಷ್ಟು ಇದೆ? ಕೃಷಿ ಎಷ್ಟು ಇದೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಎಲ್ಲಾ ಇದೆ. ಒಟ್ಟು ಏಳೂವರೆ ಎಕರೆ ಇದೆ. ಜಮೀನು ವಿಷಯವನ್ನು ಗಂಟಿಗಟ್ಟಲೆ ಮಾತನಾಡಬಹುದು ಬೇಡಿ ಅದು. ಇಲ್ಲಿ ಜಮೀನಿಗೆ ಹಾಗೂ ರೈತನಿಗೆ ಬಾಂಧವ್ಯದ ಪ್ರಶ್ನೆ. ಆದರೆ ಮಾನ್ಯ ಹಿರಿಯ ಸದಸ್ಯರು ಮೂರು ವಿಷಯವನ್ನು ಅವರ ಗಮನಕ್ಕೆ ತಂದಿದ್ದಾರೆ. ಒಂದು ಹೌಸ್ ಕಮಿಟಿ ಹಾಗೂ ಜಂಟಿ ಸಲಹಾ ಸಮಿತಿ. ಇನ್ನೊಂದು ಮಸೂದೆಯನ್ನು ವಾಪಸ್ಸು ಪಡೆಯುವಂಥದ್ದು. ಈ ವ್ಯವಸ್ಥೆಯಲ್ಲಿ ಯಾವುದಕ್ಕೂ ಒಪ್ಪಿಕೊಂಡರೂ ಸರ್ಕಾರ ಜವಾಬ್ದಾರಿ ಮೂಲಕ, ಚರ್ಚೆ ಮಾಡಿ ಬಗೆಹರಿಸುವುದು ಸೂಕ್ತ ಏಕೆಂದರೆ ತಲಾವಾರು ಲೆಕ್ಕ ಹಾಕಿಕೊಂಡರೆ ನಾವು

ನಮೆಗ ಹದಿನೆಂಟು ಗುಂಟೆ ಜಮೀನು ಬರುತ್ತದೆ. ಇಡೀ ರಾಜ್ಯದ ಜನತೆಗೆ ನೀವು ತಲಾವಾರು ಲೆಕ್ಕ ಹಾಕಿಕೊಂಡರೆ ನಮಗ ಹದಿನೆಂಟು ಗುಂಟೆ ಜಮೀನು ಬರುತ್ತದೆ. ಇಡೀ ರಾಜ್ಯದ ಜನತೆಗೆ ನೀವು ತಲಾವಾರು ಲೆಕ್ಕ ಹಾಕಿಕೊಂಡರೆ ನಮಗೆ ಹದಿನೆಂಟು ಗುಂಟೆ ಜಮೀನು ಬರುತ್ತದೆ. ಅದರಿಂದ ನೂರಕ್ಕೆ ಒಂದು ಭಾಗ ಒಂದು ಹೆಕ್ಟೇರಗೆ ಕಡಿಮೆ ಇರತಕ್ಕಂಥ ರೈತರು, ಸಣ್ಣ ಹಿಡುವಳಿದಾರರು ಒಕ್ಕಲು ಎಬ್ಬಿಸತಕ್ಕಂಥ ಕೆಲಸ ಆಗುತ್ತದೆ. ತಾವು ಬೇಕಾದರ ಇದರ ಬಗ್ಗೆ ಒಂದು ಸಮೀಕ್ಷೆ ಮಾಡಬಹುದು. ಬೆಂಗಳೂರಿನಿಂದ ಹೀಗೆ ಹದಿನೈದು ಕಿ.ಮೀ. ಹೀಗೆ ಹದಿನೈದು ಕಿ.ಮೀ. ಹೀಗೆ ಹದಿನೈದು ಕೀ.ಮಿ. ಕನಕಪುರದಲ್ಲಿ ಹದಿನೈದು ಕಿ.ಮೀ. ಸರ್ವೆ ಮಾಡಿದರೆ ಗೊತ್ತಾಗುತ್ತದೆ. ದಯವಿಟ್ಟು ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿಯನ್ನು ತೆರೆದ ಬಾಗಿಲನ್ನಾಗಿ, ಪುಷ್ಪ ಕೃಷಿ, ಆ ಕೃಷಿ, ಈ ಕೃಷಿ ಎಂದು ಹೇಳಿ, ಕೇವಲ ಕೆಲವು ಅವೈಜ್ಞಾನಿಕ ವಿಚಾರವನ್ನು ತಾವು ಆಲೋಚನೆ ಮಾಡಿ ಈ ಕರಾಳ ಮಸೂದೆಯನ್ನು ತಂದರೆ ಈ ರೈತ ಕುಲಕ್ಕೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದಕಾರಣ ದಯವಿಟ್ಟು ತಾವು ಇದರ ಬಗ್ಗೆ ವಿಚಾರ ಮಾಡಿ. ಇದನ್ನು ಪೂರ್ಣ ಪ್ರಮಾಣದಲ್ಲಿ ನಮ್ಮ ಪಕ್ಷವು ಸಹ ವಿರೋಧಿಸುತ್ತಾ, ಎಲ್ಲಾ ವಿರೋಧ ಪಕ್ಷಗಳು ಏನು ತೀರ್ಮಾನ ತೆಗೆದುಕೊಳ್ಳುತ್ತವೆ ಅದಕ್ಕೆ ನಾವು ಸಹಕಾರ ಕೊಡುತ್ತೇವೆಂದು ಹೇಳಿ ತಾವು ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಪುನಃ ಮತ್ತೊಮ್ಮೆ ಮನವಿಯನ್ನು ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಕುಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ರೈತರ ಬಗ್ಗೆ ಇರುವ ಕಳಕಳಿಯ ಬಗ್ಗೆ ನನಗೆ ಯಾವುದೇ ವಿಧವಾದ ಸಂಶಯವಿಲ್ಲ. ಆದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಈ ಭೂಸುಧಾರಣಾ ಮಸೂದೆ ನಮ್ಮಲ್ಲಿ ತಂದಿದ್ದು ಇಪ್ಪತ್ತು ವರ್ಷಗಳ ಹಿಂದೆ. ಸನ್ಮಾನ್ಯ ದೇವರಾಜ್ ಅರಸರವರ ಕಾಲದಲ್ಲಿ ಅವರ ಕಮಿಟಮೆಂಟ್ ಏನು ಇತ್ತು ಎಂಬುದು ನನಗೂ ಸಹ ಸ್ವಲ್ಪ ಅರ್ಥವಾಗಿದೆ. ಅವರು ಸಾಯವ ವರೆಗೆ ಅವರ ಜೊತೆಯೊಳಗ ಇದ್ದವನು ನಾನು. ಇವೊತ್ತು ಈ ಸುಧಾರಣೆಗಳನ್ನು ಬಲಲಾಯಿಸಲು ಕೆಲವು ಸಾಂದರ್ಭಿಕವಾದ ಬದಲಾವಣೆ ಮಾಡಬೇಕಾದಂಥ ಪರಿಸ್ಥಿತಿ ಒದಗಿದೆ. ಆದ್ದರಿಂದ ದೇವರಾಜ್ ಅರಸರವರ ಬಗ್ಗೆ ಅಭಿಮಾನವಾಗಲೀ, ಅಥವಾ ಅವರಿಗೆ ಇದ್ದ ಕಳಕಳಿಯಾಗಲೀ ಅದರಲ್ಲಿ ಲವಶೇಷಾಂಶದಷ್ಟು ಕಡಿಮೆ ಇಲ್ಲ ಎಂದು ನಾನು ಒತ್ತಿ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ ನನ್ನ ಜಮೀನನ್ನು ನಾನು ಮಾರಿಕೊಳ್ಳುತ್ತೇನೆ. ಏತಕ್ಕೆ ಕೇಳಬೇಕು ಯಾರ್ಯಾರಿಗೆ? ನನ್ನ ಇಷ್ಟ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಅವೊತ್ತು ಜಮೀನು ನನ್ನದೆ ಎಂದು ಹೇಳಿದರೆ ಭೂಮಿ ಹೋರಾಟ ಬರುತ್ತಿರಲಿಲ್ಲ. ಜಮೀನ್ದಾರರ ವಿರುದ್ಧ ಹೋರಾಟ ಮಾಡುವಾಗ ಅವರು ಹೇಳುತ್ತಿದ್ದರು ಜಮೀನು ನನ್ನದು ಉಳುವವನಿಗೆ ಏತಕ್ಕೆ ಕೊಡಬೇಕೆಂದು.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಮಾತನಾಡಲು ಅವಕಾಶ ಕೊಡಿ. ನಾನು ಹೇಳಿದ್ದನ್ನು ನೀವು

ಕೇಳಲೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಆತ್ಮ ಸಾಕ್ಷಿ.....

ಶ್ರೀ ಆರ್.ಎಲ್. ಜಾಲಪ್ಪ : ಆತ್ಮ ಸಾಕ್ಷಿ ನಿಮ್ಮ ಒಬ್ಬರಿಗೆ ಇಲ್ಲ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ಆತ್ಮಸಾಕ್ಷಿ.....

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಆತ್ಮ ಸಾಕ್ಷಿ ಎಲ್ಲಿದೆ ವಸ್ತ ಬೆಂಗಾಲದಲ್ಲಿ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಹೇಳುತ್ತೇನೆ ನಾನು ಆತ್ಮಸಾಕ್ಷಿಯ ಬಗ್ಗೆ. ನಾನು ಹೇಳುತ್ತೇನೆ ಯಾವ ಯಾವ ರಾಜ್ಯದಲ್ಲಿ ಏನೇನು ನಡೆದಿದೆ ಎಂದು. ನಾವು ಇದನ್ನು ಬದಲಾಯಿಸಲು ಕಾರಣ ಇಷ್ಟೇ. ಸಾವಿರಾರು ಎಕರೆ ಜಮೀನನ್ನು ಜಿ.ಪಿ.ಎ. ಮೂಲಕ ತೆಗೆದುಕೊಂಡರೂ ರೈತರಿಗೆ ಕಾಲು ಭಾಗ, ಅರ್ಧಭಾಗ ದುಡ್ಡುಕೊಟ್ಟು ವರ್ಷಾನುಗಟ್ಟಲೆ ಸತಾಯಿಸುತ್ತಿದ್ದಾರೆ. ಅಗ್ರಿಮೆಂಟ್ ಮೂಲಕವಾಗಿ ಜಮೀನನ್ನು ತೆಗೆದುಕೊಂಡು ಹಣವನ್ನು ಕೊಡುತ್ತಿಲ್ಲ. ಇನ್ನು ಕೆಲವು ಜನ ಬುದ್ಧಿವಂತರು ರೈತರ ಹೆಸರಿನಲ್ಲಿ ಕನವರ್ಶನ್ ಮಾಡಿಕೊಂಡು ಆಮೇಲೆ ಅದನ್ನು 500 ಎಕರೆ, 400 ಎಕರೆ, 300 ಎಕರೆ ಮಾಡಿಕೊಳ್ಳುತ್ತಿದ್ದಾರೆ ಈಗ. ಯಾರು ಅಡ್ಡಿ ಮಾಡುತ್ತೀರಿ? ಹೇಗೆ ಅಡ್ಡಿ ಮಾಡುತ್ತೀರಿ? ಯಾವ ಕಾನೂನಿನಿಂದ ಅಡ್ಡಿ ಮಾಡುತ್ತೀರಿ? 120 ದಿವಸದೊಳಗೆ ಈ ಕನವರ್ಶನ್ ಆಗದೇ ಇದ್ದರೆ, it is deemed to have been converted. ಎಂದು ಹೇಳುತ್ತದೆ ಈ ಆಕ್ಟ. ನಾವು ಏನೋ ಕಾರಣ ಕೊಟ್ಟು ಮಜಾ ಮಾಡುತ್ತೇವೆ. ಅವರು ಹೈಕೋರ್ಟಿಗೆ ಹೋಗುತ್ತಾರೆ ಏನೋ ಕಾರಣ ಕೊಟ್ಟು ಕನವರ್ಶನ್ ಆಗಿದೆ ಎಂದು ಆರ್ಡರ್ ಮಾಡಿಸಿಕೊಂಡು ಬರುತ್ತಾರೆ. ನನ್ನ ಎದುರಿಗೆ ಬೇಕಾದಷ್ಟು ಅಂತಹ ಕೇಸಗಳು ಆಗಿವೆ. ನಾವು ಯೋಚನೆ ಮಾಡಿದ್ದೇವೆ ಅಡ್ಮಿಶನ್, ಅಡ್ಮಿಶನ್ ಮೂಲಕವಾಗಿ ನೀವು ಮಾಡಿಕೊಡಿ ಎಂದು ಹೇಳುತ್ತಿದ್ದೀರಿ. ಅಡ್ಮಿಶನ್ ಆಗಬೇಕಾದರೆ ಎಷ್ಟು ವರ್ಷ ಬೇಕು? ಆಮೇಲೆ ಲಂಚ ಎಷ್ಟು ಸ್ವಾಮಿ ಅದಕ್ಕೆ? ಮೂರು ತಿಂಗಳಲ್ಲಿ ಅಡ್ಮಿಶನ್ ಆಗುತ್ತದೆಯೇ? ಆರು ತಿಂಗಳೊಳಗೆ ಆಗುತ್ತದೆಯೇ? ವರ್ಷದೊಳಗೆ ಆಗುತ್ತದೆಯೇ? ಮೊನ್ನೆತಾನೇ ಸುಪ್ರೀಮ್ ಕೋರ್ಟಿನವರು ಒಂದು ಜಡ್ಜಮೆಂಟ್ ಕೊಟ್ಟಿದ್ದಾರೆ. ನಾಲ್ಕು ಸೊಸೈಟಿಗಳಲ್ಲಿ. It was a colourable exercise of power. What does it mean? ಆಪಾಗ ನೇರವಾಗಿ ಕೊಂಡುಕೊಳ್ಳಲು ಅವಕಾಶ ಇರಲಿಲ್ಲ. ಅದಕ್ಕಾಗಿ ಒಬ್ಬ ಏಜೆಂಟ್ ಮುಖಾಂತರ ಜಮೀನನ್ನು ಕೊಂಡುಕೊಂಡಿದ್ದಾರೆ. ಅವನು ಜಿ.ಪಿ.ಎ. ಮಾಡಿಸಿಕೊಂಡ. ಇಲ್ಲಿ ಸರ್ಕಾರದ ಮೇಲೆ ಇನಫ್ಲುಯನ್ಸ ಮಾಡಿಕೊಂಡು 4161 ಮಾಡಿಸಿಕೊಂಡಿದ್ದಾನೆ. 8-9 ವರ್ಷದಿಂದ ಆಕ್ವಿಸಿಷನ್ ಪ್ರೊಸೆಡಿಂಗ್ಸ್ ನಡೆಯುತ್ತಿತ್ತು. ಬಹಳ ಜನ ತಮ್ಮ ಒಡವೆಗಳನ್ನು ಮಾಡಿ, ಸ್ಟಾಮಿಡೆಂಟ್ ಫಂಡಿನಿಂದ ಸಾಲ ತೆಗೆದುಕೊಂಡು ಕೊಟ್ಟಿದ್ದಾರೆ. ಎಲ್ಲರೂ ಸೆಂಟ್ ಪರ್ಸೆಂಟ್ ಕಿನ್ಯುಯನ್ ಎಂದು ಹೇಳುವುದಿಲ್ಲ. 60-70 ಪರ್ಸೆಂಟ್ ಆದರೂ ಜೆನ್ಯುಯನ್ ಇದ್ದಾರೆ. ಕಾರಣದಿಂದ ಅವರಿಗೆ ಜಮೀನು ವಾಪಸ್ಸು ಕೊಡಬೇಕು, ಆ ರೈತರು ದುಡ್ಡು ಕೊಟ್ಟು ಕಾಯ್ದುಕೊಂಡಿದ್ದಾರೆ,

ಅವರ ಗತಿ ಏನು? ಇದೆಲ್ಲಾ ನಾವು ಯೋಚನೆ ಮಾಡಿದ್ದೇವೆ. ಈಗ ಜಮೀನಿನ ಬೆಲೆ ಯದ್ವಾತದ್ವಾ ಹೋಗುತ್ತಿದೆ. ಇಡೀ ರಾಷ್ಟ್ರದಲ್ಲಿ ಜಮ್ಮುಮತ್ತು ಕಾಶ್ಮೀರ ಬಿಟ್ಟಿದೆ, ನಮ್ಮರಾಜ್ಯದಲ್ಲಿನಾನ್ ಅಗ್ರಿಕಲ್ಚರ್, ಅಗ್ರಿಕಲ್ಚರ್ ಲ್ಯಾಂಡ್ ತಗೆದುಕೊಳ್ಳಬಾರದು ಎಂದು ಒಂದು ಆಕ್ಟ ಇದೆ. ಅದರಲ್ಲೂ ಕೂಡ ಸೆಕ್ಷನ್ 80 ಪ್ರಕಾರ ಅಸಿಸ್ಟೆಂಟ್ ಕಮೀಷನರ್ ಪರ್ಮಿಷನ್ ತೆಗೆದುಕೊಂಡು ಜಮೀನು ಪರಚೇಸ್ ಮಾಡಬೇಕು. ಜಮ್ಮುಮತ್ತು ಕಾಶ್ಮೀರದಲ್ಲಿ ಹಾಗ ಇಲ್ಲ. But in any other State anybody can purchase provided he must purchase upto the ceiling limit, if it is beyond the ceiling limit he has to apply to the Government and take permission. That is what we are doing...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಕಾನೂನೇ ಬೇರೆ, ಬೇರೆ ರಾಜ್ಯಕ್ಕೆ ಹೋಲಿಸತಕ್ಕಂಥ ಕಾನೂನಲ್ಲ. ನಮ್ಮ ರಾಜ್ಯಕ್ಕೆ ಏನು ಕಾನೂನು ಬೇಕು ಅದನ್ನು ನಾವು ಮಾಡಿಕೊಂಡಿದ್ದೇವೆ. ತಾವು ಕಾನೂನುಬದ್ಧವಾಗಿ ಮಾಡಬೇಕು. ನೀವು ಇಡೀ ದೇಶದ ಉದಾಹರಣೆಗಳನ್ನು ಕೊಟ್ಟುಕೊಂಡು ಕುಳಿತರೆ ಹೇಗೆ? ಏಕೆಂದರೆ ನಮಗೆ ವಿಶಿಷ್ಟವಾದಂತಹ ಒಂದು ಕಾನೂನು ಇದೆ.

ಅಧ್ಯಕ್ಷರು : ಅವರು ಏನು ಗ್ರೌಂಡ್ಸ ಹೇಳುತ್ತಿದ್ದಾರೆ, ಅದನ್ನು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗೊತ್ತೇ ಇದೆಯಲ್ಲ ಅವರ ಧಾಟಿ, ಏನೆಂದರೆ ನೀವು, ಹೇಳುವುದು ಯಾವುದು ಸರಿಯಿಲ್ಲ, ನಾವು ಮಾಡುವುದೇ ಸರಿ ಎಂದು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಹೇಳಿದರು, ನಮಗೆ ಹೃದಯ ಇಲ್ಲ, ತಲೆ ಇಲ್ಲ ಎಂದು. ನಾವು ಹೇಳುವುದನ್ನು ಕೇಳುವುದಕ್ಕೆ ನಿಮಗೆ ತಲೆ ಇಲ್ಲ ಎಂದರೆ ನಾವು ಏನು ಮಾಡಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ 9ನೇ ಸೆಕ್ಷನ್ ಈ ದೇಶದ ಯಾವ ರಾಜ್ಯದಲ್ಲಿ ಇದೆ, ದಯಮಾಡಿ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಹೇಳುತ್ತೇವೆ, ತಾವು ಕುಳಿತುಕೊಂಡು ಕೇಳಿ. ನಿಮ್ಮವರು ಗುಜರಾತನಲ್ಲಿ ಏನು ಮಾಡಿದ್ದಾರೆ ಅದನ್ನೂ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೇಳಿ...

SRI R.L. JALAPPA : I am grateful to the Leader of Opposition and other friends, they allowed me to speak today....

ಶ್ರೀ ಬಿ.ಎಸ್. ಯಡಿಯೂರಪ್ಪ : ಭೂಮಿ ಮತ್ತು ರೈತ ಇವೆರಡು ಒಬ್ಬ ತಾಯಿ ಮಕ್ಕಳ ಸಂಬಂಧ ಇದ್ದಹಾಗೆ. ಆ ಸಂದರ್ಭವನ್ನು ಕಿತ್ತೊಗೆಯುವಂತಹ ಪ್ರಯತ್ನ ಈ ಕರಾಳ ಶಾಸನ. ನಿಮ್ಮ

ಯಾವುದೇ ಮಾತನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ ನಾವು.

(ಗೊಂದಲ)

(ಈ ಹಂತದಲ್ಲಿ ಸದನಲ್ಲಿದ್ದ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರೆಲ್ಲರೂ ಈ ವಿಧೇಯಕವನ್ನು ವಿರೋಧಿಸುತ್ತಾ ಸದನದ ಬಾವಿಗೆ ಬಂದು ಧರಣಿ ಕುಳಿತರು)

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ ಇವರು ಯಾರೂ ರೈತರಲ್ಲ ಸ್ವಾಮಿ, ಇವರೆಲ್ಲಾ ... you must be ashamed of it. You are not prepared to hear me...

MR. SPEAKER : You complete in two minutes...

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಇದನ್ನು ವಿರೋಧಿಸಿ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ ಪಕ್ಕದ ರಾಜ್ಯದಲ್ಲಿ ಲಿಬರಲೈಜ್ ಆಕ್ಟ ರೂಲ್ಸ ತಂದಿರುವುದರಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಎಲ್ಲಾ ಕೈಗಾರಿಕೆಗಳು ಪಕ್ಕದ ರಾಜ್ಯಗಳಿಗೆ ಹೋಗುತ್ತಿವೆ. ಉದಾಹರಣೆಗೆ ಹೇಳುವುದಾದರೆ ಪಕ್ಕದ ಹೊಸೂರಿನಲ್ಲಿ ಎಲ್ಲಾ ವಿಧವಾದ ಕೈಗಾರಿಕೆಗಳು ಬಂದಿವೆ. ಕಳೆದ 18 ತಿಂಗಳಿನಿಂದ 15 ಫ್ಲಾರಿಕಲ್ಚರ್ ಯೂನಿಟ್ಸ ಬಂದಿವೆ. ಅಲ್ಲಿ 730 ಎಕರೆ ಡೆವಲಪಮೆಂಟ್ ಆಗುತ್ತಿವೆ. ಅಲ್ಲಿ 232 ಕೋಟಿ ರೂಪಾಯಿ ಇನವೆಸ್ಟಮೆಂಟ್ ಮಾಡಿದ್ದಾರೆ. ನನ್ನ ಸ್ನೇಹಿತನೊಬ್ಬ ನೂರು ಎಕರೆ ಜಮೀನು ತೆಗೆದುಕೊಂಡು ಫ್ಲಾರಿಕಲ್ಚರ್ ಡೆವಲಪಮೆಂಟ್ ಮಾಡಿದ್ದಾನೆ. ಅದಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಭಾವಿಯಲ್ಲಿದ್ದಂತಹ ಮಾನ್ಯ ಸದಸ್ಯರುಗಳೆಲ್ಲರೂ ಧಿಕ್ಕಾರ ಎಂದು ಘೋಷಣೆ ಮಾಡುತ್ತಿದ್ದರು)

ಅಧ್ಯಕ್ಷರು : ಸನ್ಮಾನ್ಯ ಪಾಟಾಳ್ ನಾಗರಾಜರವರು ನನ್ನ ಮೇಲೆ ಒಂದು ವಿಶಿಷ್ಟವಾದಂಥ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಅವರು ನಾವೆಲ್ಲಾ ಇಲ್ಲಿ ಬರುತ್ತೇವೆ, ಸಭೆ ಆರ್ಡರನಲ್ಲಿ ಇಲ್ಲ ಎಂದು ಹೇಳಿ ರಕ್ಷಣೆ ಪಡೆದುಕೊಂಡು ಏನಾದರೂ ಮಾಡಿ, ಇದನ್ನು ಮುಂದಕ್ಕೆ ಹಾಕಿ ಎಂದು ತಿಳಿಸುತ್ತಿದ್ದಾರೆ. ನಾನೂ ಸಹ ಹಾಗೆ ಮಾಡೋಣ ಎಂದು ಆಲೋಚನೆ ಮಾಡುತ್ತಿದ್ದೆ. ಆದರೆ ಹಿಂದೆ ಇದ್ದಂತಹ ಅಧ್ಯಕ್ಷರು ಏನು ಮಾಡಿದ್ದಾರೆಂದರೆ ಧರಣಿ ಇದ್ದಾಗಲೂ ಕೂಡ House go in order ಎಂದು ರೂಲಿಂಗ್ಸ ಕೊಟ್ಟಿದ್ದಾರೆ. ಹಾಗಾಗಿ ನಾನು ನಿಮ್ಮ ಬೇಡಿಕ...

(ಗೊಂದಲ)

(ಈ ಹಂತದಲ್ಲಿ ಭಾವಿಯಲ್ಲಿದ್ದಂತಹ ಮಾನ್ಯ ಸದಸ್ಯರುಗಳು ಪ್ರತಿಭಟನೆ ಮಾಡುತ್ತಿದ್ದು, ಇದರ ಮಧ್ಯೆ ವಿಧೇಯಕವನ್ನು ಪಾಸ್ ಮಾಡಲಾಯಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996 ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕಕ್ಕೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಈ ವಿಧೇಯಕವನ್ನು ಪಾಸ್ ಮಾಡುವಾಗ ಕೊನೇ ಹಂತದವರೆಗೂ ಬಾವಿಯಲ್ಲಿದ್ದ ಮಾನ್ಯ

ಸದಸ್ಯರುಗಳು ತಮ್ಮ ಪ್ರತಿಭಟನೆ ಸೂಚಿಸಿದರು)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಇದೇ ಸದನದಲ್ಲಿ ಮಾನ್ಯ ಮೊಯಿಲಿ, ಮಾನ್ಯ ಬಂಗಾರಪ್ಪನವರ ಕಾಲದಲ್ಲಿ....

(ಗೊಂದಲ)

ಅಧ್ಯಕ್ಷರು : ಈಗ ಸಭೆಯನ್ನು ಮುಂಮೊದಿ ಪುನಃ ನಾಳೆ ಬೆಳಿಗ್ಗೆ 9.00 ಗಂಟೆಗೆ ಅಧಿವೇಶನ ಪ್ರಾರಂಭವಾಗುತ್ತದೆ.

(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 7ನೇ ಮಾರ್ಚ್ 1996ರ ಗುರುವಾರ ಬೆಳಿಗ್ಗೆ 9 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಪ್ಪೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)